ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 110 RNI Number : KNKAN/25/A2770 29-04-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :110 ರಾಯಚೂರು 29-04-2026 ಬುಧವಾರ ಪುಟ 04 ಬೆಲೆ ರೂ.2/- ಮೊ:8660146563

ಮೋದಿ-ದೀದಿ ಕೊನೆ ಫೈಟ್ : ಇಂದು ಪಶ್ಚಿಮ ಬಂಗಾಳದಲ್ಲಿ 2ನೇ ಹಂತದ ಮತದಾನ

ಕೋಲ್ಕತ್ತಾ, ಏ. 28-

ಭಾರತೀಯ ಜನತಾ ಪಕ್ಷ ಮತ್ತು ತೃಣಮೂಲ ಕಾಂಗ್ರೆಸ್ ನಡುವಿನ ಯುದ್ಧ ಎಂದೇ ಪರಿಗಣಿಸಲಾಗಿರುವ ಪಶ್ಚಿಮ ಬಂಗಾಳದಲ್ಲಿ ನಾಳೆ ಎರಡನೇ ಹಂತದ ಚುನಾವಣೆ ನಡೆಯಲಿದೆ.

ಬಂಗಾಳದ ರಾಜಕೀಯ ಹೃದಯಭಾಗದಲ್ಲಿ 142 ಶಾಸಕರನ್ನು ಆಯ್ಕೆ ಮಾಡುವುದಲ್ಲದೆ, ಟಿಎಂಸಿ ಇನ್ನೂ ತನ್ನ ದಕ್ಷಿಣ ಕೋಟೆಯನ್ನು ಹೊಂದಿದೆಯೇ ಅಥವಾ ಬಿಜೆಪಿ ಈ ಭಾಗದಲ್ಲೂ ಅಸ್ತಿತ್ವ ಉಳಿಸಿಕೊಳ್ಳಲಿದೆಯೇ ಎನ್ನುವುದು ನಾಳೆ ನಿರ್ಧಾರವಾಗಲಿದೆ.

ಏ. 23 ರಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ ಉತ್ತರ ಬಂಗಾಳ ಮತ್ತು



ಪಕ್ಕದ ಜಿಲ್ಲೆಗಳಲ್ಲಿ ಬಿಜೆಪಿ ತನ್ನ ಸಾಂಪ್ರದಾಯಿಕ ಪ್ರಾಬಲ್ಯವನ್ನು ಉಳಿಸಿಕೊಳ್ಳಬಹುದೇ ಎಂದು ಪರೀಕ್ಷಿಸಿದ್ದರೆ, ಅಂತಿಮ ಸುತ್ತಿನ ಚುನಾವಣೆಯು ಟಿಎಂಸಿಯ ತವರು ಕ್ಷೇತ್ರವಾದ ಕೋಲ್ಕತ್ತಾ, ಹೌರಾ, ಉತ್ತರ ಮತ್ತು ದಕ್ಷಿಣ 24 ಪರಗಣಗಳು, ನಾಡಿಯಾ, ಹೂಗ್ಲಿ ಮತ್ತು ಪುರ್ಬಾ ಬರ್ಧಮಾನ್‌ಗೆ ನಿರ್ಣಾಯಕವಾಗಿ ಹೋರಾಟವನ್ನು ಬದಲಾಯಿಸುತ್ತದೆ.

ಈಗ ಚುನಾವಣೆಗೆ ಹೋಗುವ 142 ಸ್ಥಾನಗಳಲ್ಲಿ, ಟಿಎಂಸಿ 2021 ರಲ್ಲಿ 123 ಸ್ಥಾನಗಳನ್ನು ಗೆದ್ದಿತ್ತು, ಬಿಜೆಪಿ ಕೇವಲ 18 ಸ್ಥಾನಗಳನ್ನು ಮತ್ತು ಐಎಸ್‌ಎಫ್ ಒಂದು ಸ್ಥಾನವನ್ನು ಗೆದ್ದಿತ್ತು.ಐದು ವರ್ಷಗಳ ಹಿಂದೆ ಬಿಜೆಪಿಯ ಆಕ್ರಮಣಕಾರಿ ಪ್ರಯತ್ನದ ಹೊರತಾಗಿಯೂ, ಮಮತಾ ಬ್ಯಾನರ್ಜಿ ಅವರ ಪಕ್ಷವು ದಕ್ಷಿಣ ಬಂಗಾಳವನ್ನು ಸುಲಭವಾಗಿ ಗೆದ್ದು ರಾಜ್ಯದ ನಿಯಂತ್ರಣವನ್ನು ಉಳಿಸಿಕೊಂಡಿದ್ದರು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ರಾಜಕೀಯ ಆಶ್ರಯ ತಾಣ ಮತ್ತು ಬಿಜೆಪಿ ಆಯ್ಕೆ ಮಾಡಿದ ಮಾನಸಿಕ ಯುದ್ಧಭೂಮಿಯಾಗಿರುವ ಭವಾನಿಪುರದಲ್ಲಿ ಅವರು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿಯನ್ನು ಎದುರಿಸುತ್ತಾರೆ, ಇದನ್ನು ಇಲ್ಲಿ ಅನೇಕರು ಎಲ್ಲಾ ಚುನಾವಣಾ ಸ್ಪರ್ಧೆಗಳ ತಾಯಿ ಎಂದು ಕರೆಯುತ್ತಾರೆ.

ಬಿಜೆಪಿಗೆ, ಎರಡನೇ ಹಂತವು ಕೇವಲ

3 ನೇ ಪುಟಕ್ಕೆ...

ರಾಜ್ಯದಲ್ಲಿ ನಾಯಕತ್ವದ ಗೊಂದಲ ಮುಂದುವರೆಯಲು ಹೈಕಮಾಂಡ್ ಅವಕಾಶ ನೀಡಬಾರದು: ಕೆ.ಎನ್. ರಾಜಣ್ಣ

ಬೆಂಗಳೂರು,ಏ.28-

ಕಾಂಗ್ರೆಸ್ ಹೈಕಮಾಂಡ್ ರಾಜ್ಯದಲ್ಲಿ ನಾಯಕತ್ವದ ಗೊಂದಲ ಮುಂದುವರೆಯಲು ಅವಕಾಶ ನೀಡಬಾರದು ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೊಂದಲ ಮುಂದುವರೆದಷ್ಟು ಪಕ್ಷಕ್ಕೆ ಹಾನಿಯಾಗುತ್ತದೆ. ಹೀಗಾಗಿ ಶೀಘ್ರವೇ ನಾಯಕತ್ವದ ವಿಚಾರದ ಗೊಂದಲವನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ನಮ್ಮ ಸರ್ಕಾರ ಇನ್ನಷ್ಟು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. ಅದಕ್ಕಾಗಿ ಗೊಂದಲ ನಿವಾರಣೆಯಾಗಬೇಕು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಕ್ತ ಮನಸ್ಸನ್ನು ಹೊಂದಿದ್ದು, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಸೂಚನೆಗಳನ್ನು ಪಾಲಿಸುವುದಾಗಿ ಈಗಾಗಲೇ ತಿಳಿಸಿದ್ದಾರೆ ಎಂದರು.

ರಾಹುಲ್ ಗಾಂಧಿಯವರ ತೀರ್ಮಾನದಂತೆ ನಡೆದುಕೊಳ್ಳೋಣ ಎಂದಿರುವ ಸಿದ್ದರಾಮಯ್ಯ ಅವರು ಅಧಿಕಾರ ಮುಂದುವರಿಸಲು ಸಿದ್ಧರಿದ್ದಾರೆ. ಹಾಗೆಯೇ ಹೈಕಮಾಂಡ್ ಸೂಚಿಸಿದರೆ ರಾಜೀನಾಮೆ ನೀಡಲು ಕೂಡ ಸಿದ್ಧರಿದ್ದಾರೆ.

3 ನೇ ಪುಟಕ್ಕೆ...

ದ್ವಿತೀಯ ಪಿಯುಸಿ ಪರೀಕ್ಷೆ-2 ಸುಸೂತ್ರವಾಗಿ ನಡೆಸಿ- ಅಪರ ಜಿಲ್ಲಾಧಿಕಾರಿ ಶಿವಾನಂದ

ರಾಯಚೂರು.ಏ.28-

ದ್ವಿತೀಯ ಪಿಯುಸಿ ಪರೀಕ್ಷೆ-2. ರಾಯಚೂರು ಜಿಲ್ಲೆಯಲ್ಲಿ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಸುಸೂತ್ರವಾಗಿ ನಡೆಸಿ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಹೇಳಿದರು

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕರೆದ ದ್ವಿತೀಯ ಪಿಯುಸಿ ಪರೀಕ್ಷೆ- 2 ರ ಪೂರ್ವ ಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಏಪ್ರಿಲ್. 30 ರಿಂದ ಮೇ. 13 ರವರೆಗೆ ಜಿಲ್ಲೆಯಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ-2 ಯಾವುದೇ ಸಮಸ್ಯೆಗಳಾಗದಂತೆ ನಡೆಸಬೇಕು. ಪರೀಕ್ಷೆಗೆ ನಿಯೋಜಿತ



ಅಧಿಕಾರಿ ಮತ್ತು ಸಿಬ್ಬಂದಿಗಳು ತಮಗೆ ನಿಗದಿಪಡಿಸಿದ ಸಮಯಕ್ಕೆ ಪರೀಕ್ಷಾ ಕೇಂದ್ರಗಳಲ್ಲಿ ಹಾಜರಿರಬೇಕು. ಜಿಲ್ಲೆಯಲ್ಲಿ ಒಟ್ಟು 6 ಪರೀಕ್ಷಾ ಕೇಂದ್ರಗಳಿದ್ದು. ರಾಯಚೂರು ತಾಲ್ಲೂಕಿನಲ್ಲಿ ಎರಡು. ಲಿಂಗಸೂಗುರು ತಾಲ್ಲೂಕಿನಲ್ಲಿ ಒಂದು. ದೇವದುರ್ಗ ತಾಲ್ಲೂಕಿನಲ್ಲಿ ಒಂದು. ಸಿಂಧನೂರು ತಾಲ್ಲೂಕಿನಲ್ಲಿ ಒಂದು ಹಾಗೂ ಮಾನವಿ ತಾಲ್ಲೂಕಿನಲ್ಲಿ ಒಂದು ಸೇರಿ ಒಟ್ಟು 6 ಪರೀಕ್ಷಾ ಕೇಂದ್ರಗಳು ಜಿಲ್ಲೆಯಲ್ಲಿದ್ದು ಯಾವುದೇ ಕೇಂದ್ರಗಳಲ್ಲಿ ಸಮಸ್ಯೆಗಳಾಗದಂತೆ ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳು ನೋಡಿಕೊಳ್ಳಬೇಕೆಂದರು.

ಎಸ್.ಎಸ್.ಎಲ್.ಸಿ ಯಲ್ಲಿ ಬಂದ ಉತ್ತಮ ಫಲಿತಾಂಶ ಪಿಯುಸಿಯಲ್ಲಿ ಬರುವಂತೆ ಎಲ್ಲರೂ ಶ್ರಮಿಸಬೇಕು. ತಮಗೆ ಏನಾದರೂ ಸಮಸ್ಯೆಗಳಾದರೆ ನಮ್ಮ ಗಮನಕ್ಕೆ ತರಬೇಕು ದ್ವಿತೀಯ ಪಿಯುಸಿ ಪರೀಕ್ಷೆ-1 ಯಶಸ್ವಿಯಾಗಿ ನಡೆಸಿದಂತೆ ದ್ವಿತೀಯ ಪಿಯುಸಿ ಪರೀಕ್ಷೆ-2 ನ್ನು ಯಶಸ್ವಿಯಾಗಿ ನಡೆಸಬೇಕು.

3 ನೇ ಪುಟಕ್ಕೆ...

ಎ ವಸಂತ್ ಕುಮಾರ್‌ರಿಂದ ನಗರ ಪ್ರಾಥಮಿಕ ಅರೋಗ್ಯ ಕೇಂದ್ರಗಳಿಗೆ ದಿಡೀರ್ ಭೇಟಿ ,ಪರಿಶೀಲನೆ

ರಾಯಚೂರು,ಏ.28-

ರಾಯಚೂರು ನಗರ ಪ್ರಾಥಮಿಕ ಅರೋಗ್ಯ ಕೇಂದ್ರ ಎಲ್ ಬಿ ಎಸ್ ನಗರದ ಪ್ರಾಥಮಿಕ ಅರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಆಸ್ಪತ್ರೆಯ ಸ್ವಚ್ಚತೆ, ಸಿಬ್ಬಂದಿ ಹಾಜರಾತಿ, ಮತ್ತು ಔಷದಗಳ ಲಭ್ಯತೆ ಬಗ್ಗೆ ವಿಚಾರಿಸಿದರು, ಸಿಬ್ಬಂದಿಗಳ ಹಾಜರಾತಿ ಪರಿಶೀಲಿಸಿ ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಂಡು ಕರ್ತವ್ಯದ ಸಮಯದಲ್ಲಿ ಎಲ್ಲರು ಕಡ್ಡಾಯವಾಗಿ ಹಾಜರಾಗಿರಬೇಕೆಂದು ತಿಳಿಸಿದರು.

ತದನಂತರ ಹರಿಜನವಾಡ್ ನಗರ ಪ್ರಾಥಮಿಕ ಅರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆಗೆ



ಬಂದಿದ್ದ ಸಾರ್ವಜನಿಕರಲ್ಲಿ ಆಸ್ಪತ್ರೆಯಲ್ಲಿ ಸಿಬ್ಬಂದಿಗಳ ಸ್ಪಂದನೆ, ಚಿಕಿತ್ಸೆ , ಮತ್ತು ಔಷಧಗಳ ಸರಿಯಾದ ರೀತಿಯಲ್ಲಿ ವಿತರಿಸಲಾಗುತ್ತದೆ ಎಂದು ವಿಚಾರಿಸಿದರು, ರೋಗಿಗಳ ದಾಖಲಾತಿ ವಿವರ ಪರಿಶೀಲಿಸಿದರು. ವೈದ್ಯರು ಕೆಲವು ವ್ಯಕ್ತಿಗಳು ಆಸ್ಪತ್ರೆಯ ಸಿಬ್ಬಂದಿಗಳು ಕರ್ತವ್ಯ

3 ನೇ ಪುಟಕ್ಕೆ...

ಅಹಿಂಧಾ ನಾಯಕರಿಗೆ ರಾಜಕೀಯ ಟಾರ್ಗೆಟ್ ಶಿವಪ್ಪ ಪೂಜಾರಿ ಖಂಡನೆ

ರಾಯಚೂರು,ಏ.28-

ಶಿವಪ್ಪ ಪೂಜಾರಿ ಜಿಲ್ಲಾ ಅಧ್ಯಕ್ಷರು ರಾಯಚೂರು ಇವರು ಮಾತನಾಡುತ್ತಾ ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಹಿಂದ (ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳು ಮತ್ತು ದಲಿತ) ಸಮುದಾಯದ ಮುಖಂಡರ ಮೇಲೆ ನಡೆಯುತ್ತಿರುವ ಟಾರ್ಗೆಟ್ ರಾಜಕೀಯ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವಕ್ಕೆ ರಾಷ್ಟ್ರೀಯ ಅಹಿಂದ ಸಂಘಟನೆ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಅಹಿಂದ ಸಮುದಾಯದ ನಿರ್ಣಾಯಕ ಪಾತ್ರವನ್ನು ಯಾರೂ ನಿರಾಕರಿಸಲಾರರು. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯಗಳು ಒಗ್ಗೂಡಿ ನೀಡಿದ



ರಾಜಕೀಯ ಬೆಂಬಲವೇ ಈ ಸರ್ಕಾರದ ಆಧಾರಸ್ತಂಭವಾಗಿದೆ. ಆದರೆ, ಸರ್ಕಾರ ರಚನೆಯಾದ ನಂತರ ಇದೇ ಸಮುದಾಯಗಳ ನಾಯಕತ್ವವನ್ನು ಕಡೆಗಣಿಸುವುದು ಮತ್ತು ಅವರನ್ನು ರಾಜಕೀಯವಾಗಿ ದುರ್ಬಲಗೊಳಿಸುವ ಕ್ರಮಗಳು ನಡೆಯುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ.

ಇತ್ತೀಚಿನ ಘಟನೆಗಳನ್ನು ಅವಲೋಕಿಸಿದರೆ, ಅಹಿಂದ ಸಮುದಾಯದಿಂದ ಬೆಳೆದ ನಾಯಕರನ್ನು ವ್ಯವಸ್ಥಿತವಾಗಿ ಟಾರ್ಗೆಟ್ ಮಾಡುವ ಪ್ರವೃತ್ತಿ ಗೋಚರಿಸುತ್ತದೆ. ಕೆ.ಎನ್. ರಾಜಣ್ಣ ಅವರ ವಿಚಾರವಾಗಲಿ, ಅಲ್ಪಸಂಖ್ಯಾತರ ರಾಜ್ಯಾಧ್ಯಕ್ಷ ಜಬ್ಬಾರ್ ಹಾಗೂ ರಾಜಕೀಯ ಕಾರ್ಯದರ್ಶಿ ನಾಸೀರ್ ಅಹಮದ್ ಅವರ ಮೇಲೆ ತೆಗೆದುಕೊಳ್ಳಲಾದ ಕ್ರಮವಾಗಲಿ - ಇವೆಲ್ಲವೂ ಸಮರ್ಪಕ ಪ್ರಕ್ರಿಯೆಗಳನ್ನು ಅನುಸರಿಸದೆ ನಡೆದಿರುವುದು ಪ್ರಶ್ನಾರ್ಹವಾಗಿದೆ. ಇದೇ ರೀತಿಯಲ್ಲಿ, ಸಚಿವ 'ರಾಗಿರುವ ಬಿ.ಜೆಡ್. ಜಮೀರ್ ಅಹ್ಮದ್ ಅವರನ್ನು ಕೂಡ ರಾಜಕೀಯವಾಗಿ ಟಾರ್ಗೆಟ್ ಮಾಡುತ್ತಿರು ವುದು ಕಂಡುಬರುತ್ತಿದೆ.

ಈ ಘಟನೆಗಳು ವೈಯಕ್ತಿಕ ಮಟ್ಟದ ವಿಷಯಗಳಲ್ಲ; ಇವುಗಳ ಹಿಂದೆ ಪಟ್ಟಭದ್ರ ಶಕ್ತಿಗಳ ಪ್ರಭಾವ ಹಾಗೂ ಅಹಿಂದ ನಾಯಕತ್ವವನ್ನು ದುರ್ಬಲಗೊಳಿಸುವ ಸಂಯೋಜಿತ ಪ್ರಯತ್ನಗಳ ಸುಳಿವು ಕಾಣಿಸುತ್ತಿದೆ. ಅಹಿಂದ ಸಮುದಾಯದಲ್ಲಿ ನಾಯಕತ್ವ ಬೆಳೆಸುವುದು ಸ್ವತಃ ಸಮಾಜದ ವಿಷಯವಾಗಿರುವಾಗ, ಬೆಳೆದ ನಾಯಕರನ್ನೇ ಟಾರ್ಗೆಟ್ ಮಾಡುವುದು ಸಾಮಾಜಿಕ ನ್ಯಾಯದ ಮೂಲ ಆಶಯಕ್ಕೆ ವಿರುದ್ಧವಾಗಿದೆ.

ಇದರಲ್ಲಿ ರಾಜ್ಯದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಪಾತ್ರ ಮತ್ತು ಅವರ ಹಿಂದೆ ಇರುವ ಕಾಣದ ಕೈಗಳ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವಿಸುತ್ತಿವೆ.

ಈ ರೀತಿಯ ಬೆಳವಣಿಗೆಗಳು

3 ನೇ ಪುಟಕ್ಕೆ...

ಹ್ಯಾಟ್ರಿಕ್ ಶಾಸಕ ಹಿಟ್ನಾಳ್‌ರಿಗೆ ಸಚಿವ ಸ್ಥಾನ ನೀಡುವಂತೆ ನಾಗವೇಣಿ ಒತ್ತಾಯ

ಸಿಂಧನೂರು,ಏ.28-

ಮುಂಬರುವ ಸಚಿವ ಸಂಪುಟವಿಸ್ತರಣೆಯ ಸಂದರ್ಭದಲ್ಲಿ ರಾಬಕೋವಿ ಹಾಲು ಒಕ್ಕೂಟದ ಅಧ್ಯಕ್ಷರು ಹಾಗೂ ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ರಾಘವೇಂದ್ರ ಹಿಟ್ನಾಳ್ ಅವರಿಗೆ, ಸಚಿವಸ್ಥಾನ ನೀಡುವಂತೆ ಹಾಲುಮತ ಸಮಾಜದ ಯುವನಾಯಕಿ ನಾಗವೇಣಿ ಎಸ್ ಪಾಟೀಲ್ ಸಿಂಧನೂರು ಅವರು ಒತ್ತಾಯಿಸಿದ್ದಾರೆ.

ಪತ್ರಿಕೆಯೊಂದಿಗೆ ಮಾತನಾಡಿದ ನಾಗವೇಣಿ ಎಸ್ ಪಾಟೀಲ್ ಅವರು, ಸಾರ್ವತ್ರಿಕವಿಧಾನಸಭಾ ಚುನಾವಣೆಯಲ್ಲಿ ಮೂರು ಬಾರಿ

3 ನೇ ಪುಟಕ್ಕೆ...

ಮೇ, 3 ರಂದು ಸಾಮೂಹಿಕ ವಿವಾಹಗಳು : ಬಸನಗೌಡ ಬಾದರ್ಲಿ



ಸಿಂಧನೂರು,ಏ.28-

ಬಸನಗೌಡ ಬಾದರ್ಲಿ ಪೌಂಡೇಶನ್ ವತಿಯಿಂದ ನಿರಂತರವಾಗಿ ಅನೇಕ ಸಾಮಾಜಿಕ ಮತ್ತು ಜನಪರ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಲೇ ಬಂದಿದೆ. ಪ್ರಸ್ತುತ ನಾನು ವಿಧಾನ ಪರಿಷತ್ ಸದಸ್ಯನಾಗಿ ನೇಮಕವಾಗಿ ಒಂದು ಪೂರ್ಣ ಗೊಂಡಿದೆ. ವಿಧಾನ ಪರಿಷತ್ ಶಾಸಕನಾದ ಮೇಲೆ ನನ್ನ ಕ್ಷೇತ್ರದಲ್ಲಿ ಕೈಗೊಂಡಿರುವ ಜನಪರ ರೈತಪರ ಕಾರ್ಯ ಸಾಧನೆಗಳ ಪೀಠಿಕೆ ಬಿಡುಗಡೆ ಹಿನ್ನಲೆಯಲ್ಲಿ ನಗರದ ಕುಷ್ಟಗಿ ರಸ್ತೆಯಲ್ಲಿರುವ ತಾಲೂಕ ಕ್ರೀಡಾಗಣದಲ್ಲಿ ಮೇ 3 ರಂದು 151 ಜೋಡಿಗಳ ಸರ್ವಧರ್ಮಗಳ ಉಚಿತ ಸಾಮೂಹಿಕ ವಿವಾಹಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಹೇಳಿದರು

ಸೋಮವಾರರಂದು ನಗರದ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡುತ್ತಾ ಈಗಾಗಲೇ ತಾಲೂಕಿನಾದ್ಯಾತ ಉಚಿತ ಸಾಮೂಹಿಕ ವಿವಾಹಗಳ ಕುರಿತು ಪ್ರಚಾರ ಕೈಗೊಳ್ಳಲಾಗಿದೆ. ಉಚಿತ ಸಾಮೂಹಿಕ ವಿವಾಹಗಳಿಂದ ಬಡವರಿಗೆ ಆರ್ಥಿಕ ಹೊರೆ ಕಡಿಮೆ ಆಗಲಿದೆ. ಮೇ 3 ರಂದು ನೆಡೆಯುವ

3 ನೇ ಪುಟಕ್ಕೆ...

ಬಿಸಿಲಾಘಾತದಿಂದ ಕಾರ್ಮಿಕ ಮೃತ್ಯು

ರಾಯಚೂರು ,ಏ.28-

ತಾಲೂಕಿನ ಯಾಪಲದಿನ್ನಿ ಗ್ರಾಮದಲ್ಲಿ ನರೇಗಾ ಯೋಜನೆಯಡಿ ಕೆರೆ ಅಭಿವೃದ್ಧಿ ಕಾಮಗಾರಿ ನಡೆಸುವ ವೇಳೆ ಬಿಸಿಲಾಘಾತದಿಂದ ಕಾರ್ಮಿಕನೊಬ್ಬ ಮೃತಪಟ್ಟಿರುವ ಘಟನೆ ನಡೆದಿದೆ. ಮೃತರನ್ನು ಹುಸೇನಪ್ಪ(50) ಎಂದು ಗುರುತಿಸಲಾಗಿದೆ.

ಯಾಪಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಳ್ಳಕುಂಟಾ ಕೆರೆ ಅಭಿವೃದ್ಧಿ ಕಾಮಗಾರಿ ಕಳೆದ ನಾಲ್ಕು ದಿನಗಳಿಂದ ಮಹಾತ್ಮ

ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಅಡಿಯಲ್ಲಿ ನಡೆಯುತ್ತಿತ್ತು. ಸೋಮವಾರ



ಮಧ್ಯಾಹ್ನ ಸುಮಾರು 12 ಗಂಟೆ ಸುಮಾರಿಗೆ ಕೆಲಸ ಮಾಡುತ್ತಿದ್ದ ವೇಳೆ ಹುಸೇನಪ್ಪ ಅವರಿಗೆ ಬಿಸಿಲಾಘಾತವಾಗಿದ್ದು, ಸ್ಥಳದಲ್ಲೇ ಕುಸಿದು ಬಿದ್ದಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಪುರಾತನ ಕಲ್ಯಾಣಿಯನ್ನು ಸ್ವಚ್ಚತೆ ಮೂಲಕ ಮಾನವೀಯತೆ ಮೆರೆದ ಸಂಸ್ಕೃತಿ ಸೇವಾ ಟ್ರಸ್ಟ್ (ರಿ) ರಾಯಚೂರು ತಂಡ

ರಾಯಚೂರು ,ಏ.28-

ರಾಯಚೂರು ಜಿಲ್ಲೆಯಲ್ಲಿ ನಿರಂತರವಾಗಿ ಎರಡು ಮೂರು ವರ್ಷಗಳಿಂದ ವಿವಿಧ ರೀತಿಯ ಸಾಮಾಜಿಕ ಕಾರ್ಯಗಳನ್ನು ಮಾಡುವುದರ ನಿಸ್ವಾರ್ಥ ಸೇವೆಗೆ ನಿಜವಾದ ಅರ್ಥವನ್ನು ತಂದೊಡ್ಡಿದ ಸಂಸ್ಕೃತಿ ಸೇವಾ ಟ್ರಸ್ಟ್ (ರಿ)ರಾಯಚೂರು ತಂಡದ ಕಾರ್ಯ ನಿಜಕ್ಕೂ ಸಮಾಜಕ್ಕೆ ಮಾದರಿ ಯಾಕೆ ಅಂದರೆ ಈ ಸಮಾಜದಲ್ಲಿ ಜನರು ಜನರ ಮಧ್ಯ ಮಾತನಾಡುವುದಕ್ಕೂ ಸಮಯವಿಲ್ಲದಂತ ಸಮಯ ಬಂದೊದಿಗಿದೆ ಅಂತದರಲ್ಲಿ ಸಂಸ್ಕೃತಿ ಸೇವಾ ಟ್ರಸ್ (ರಿ)ರಾಯಚೂರ ಇವರು ರಾಯಚೂರು ಜಿಲ್ಲೆಯಾದ್ಯಂತ ಹೊಸ ಅಭಿಯಾನ ( )



ಎನ್ನುವ ವಾಕ್ಯದೊಂದಿಗೆ ಪ್ರತಿ ಭಾನುವಾರ ಇತಿಹಾಸಿಕ ಗುಡಿ ಗುಂಡಾರಗಳು ಬಾವಿಗಳು ಬಸ್ ತಂಗು ದಾಣಗಳು ಸಾರ್ವಜನಿಕ ಸ್ಥಳಗಳು ಪ್ರಾಣಿ ಪಕ್ಷಿಗಳಿಗಾಗಿ ನೀರಿನರ ಒಟ್ಟಿಗೆ ಸಾರ್ವಜನಿಕರಿಗೆ ನೀರಿನ ಅರವಟ್ಟಿಗೆ ಅನ್ನದಾಸೋಹ ಸೇವೆ ಗ್ರಾಮೀಣ ಭಾಗದ ಮಕ್ಕಳಿಗೆ ನೋಟ್ ಬುಕ್ ವಿತರಣೆ ಬಡ ಬಗ್ಗರಿಗೆ ದಿನಸಿಗಳು ನೀಡುವಂತದ್ದು ಅಂದ ಅಂಗವಿಕಲರಿಗೆ ಆರೋಗ್ಯ ಸಲಕರಣೆ ನೀಡುವುದು ಇನ್ನು ಹಲವು ಸಾಮಾಜಿಕ ಕಾರ್ಯಗಳನ್ನು ನಿತ್ಯ ನಿರಂತರ ಮಾಡುವುದರ ಜೊತೆಗೆ ಈ ದಿನ 17ನೇ ಭಾನುವಾರದ ಜವಾರನಗರದಲ್ಲಿರುವ ಶ್ರೀಗುರು ರಾಘವೇಂದ್ರರ ಮಠ ಪಕ್ಕದಲ್ಲಿರುವಂತ ಎರಡು ನೂರು ವರ್ಷ ಇತಿಹಾಸವುಳ್ಳ ಪ್ರಸಿದ್ದವಾದ ಹಂಪಿಯ ಶೈಲಿಯನ್ನು ಹೋಲುವ

3 ನೇ ಪುಟಕ್ಕೆ...

ಉಚಿತ ಸಮ್ಮರ್ ಕ್ಯಾಂಪ್‌ನಲ್ಲಿ ಮಕ್ಕಳಿಗೆ ಚಟುವಟಿಕೆ ಆಧಾರಿತ ಕಲಿಕೆ



ರಾಯಚೂರು.28-ಅಕ್ಷರ ಫೌಂಡೇಶನ್ ವತಿಯಿಂದ ಸಿಂಗನೋಡಿ ಕ್ಲಸ್ಟರ್ ವ್ಯಾಪ್ತಿಯಲ್ಲಿ ಉಚಿತ ಸಮ್ಮರ್ ಕ್ಯಾಂಪ್ ಜೋರಾಗಿ ನಡೆಯುತ್ತಿದೆ. ವಡವಟ್ಟಿ ಗ್ರಾಮದಲ್ಲಿ ಪ್ರತಿ ಸೋಮವಾರ ಆಯೋಜಿಸಲಾಗುತ್ತಿರುವ ಈ ಶಿಬಿರದಲ್ಲಿ 4ರಿಂದ 8ನೇ ತರಗತಿಯ ಸುಮಾರು 2830 ಮಕ್ಕಳು ನಿಯಮಿತವಾಗಿ ಹಾಜರಾಗಿ ಉತ್ಸಾಹದಿಂದ ಭಾಗವಹಿಸುತ್ತಿರುವುದು ಕಂಡು ಬಂದಿದೆ.

ಶಿಬಿರದಲ್ಲಿ ಮಕ್ಕಳನ್ನು ಎರಡು ಗುಂಪುಗಳಾಗಿ ವಿಭಜಿಸಿ ಗಣಿತ, ಇಂಗ್ಲಿಷ್ ಹಾಗೂ ಕನ್ನಡ ವಿಷಯಗಳನ್ನು ಚಟುವಟಿಕೆ ಆಧಾರಿತವಾಗಿ ಬೋಧಿಸಲಾಗುತ್ತಿದೆ. ವಿಶೇಷವಾಗಿ ಕನ್ನಡ ಕಲಿಕೆಗೆ ಕಾರ್ಡ್‌ಗಳ ಬಳಕೆ ಮಾಡಲಾಗುತ್ತಿದ್ದು, ಇದರಿಂದ ಮಕ್ಕಳು ಸುಲಭವಾಗಿ ಅಕ್ಷರಗಳನ್ನು ಅರಿತುಕೊಳ್ಳುತ್ತಿದ್ದಾರೆ. ಜೊತೆಗೆ ಜನರಲ್ ನಾಲೆಜ್ ವಿಷಯದಲ್ಲಿಯೂ

3 ನೇ ಪುಟಕ್ಕೆ...

ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ : ಡಾ. ಸೂರ್ಯಕಾಂತ ಸುಜ್ಯಾತ

ಮನೆಗೊಂದು ಗ್ರಂಥಾಲಯ ಯೋಜನೆಗೆ ಚಾಲನೆ

ಕಲಬುರಗಿ,ಏ.28-

ಪುಸ್ತಕಗಳು ಜ್ಞಾನ, ಅನುಭವ ಹಾಗೂ ಜೀವನದ ದಾರಿದೀಪಗಳಾಗಿವೆ. ಒಳ್ಳೆಯ ಪುಸ್ತಕವು ನೆಮ್ಮದಿಯ ಬದುಕಿಗೆ ಬೆಳಕಾಗುತ್ತದೆ ಎಂದು ಖ್ಯಾತ ಸಾಹಿತಿ ಡಾ. ಸೂರ್ಯಕಾಂತ ಸುಜ್ಯಾತ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ಜಿಲ್ಲಾ ಜಾಗೃತಿ ಸಮಿತಿ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ''ಮನೆಗೊಂದು ಗ್ರಂಥಾಲಯ'' ಯೋಜನೆಯಡಿ ಸಿದ್ದೇಶ್ವರ ಕಾಲೊನಿಯಲ್ಲಿರುವ ಸಾಹಿತಿ ಹಾಗೂ ಪ್ರಾಚಾರ್ಯ ಡಾ. ರಾಜಶೇಖರ ಮಾಂಗ್ ಅವರ ಮನೆಯಲ್ಲಿ ಗ್ರಂಥಾಲಯ ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿಯೊಬ್ಬರ ಮನೆಯಲ್ಲಿ ಗ್ರಂಥಾಲಯ ಸ್ಥಾಪನೆ ಮಾಡುವ ಉದ್ದೇಶದಿಂದ ಪ್ರಾಧಿಕಾರವು ಉತ್ತಮ ಯೋಜನೆ ರೂಪಿಸಿರುವುದು ಶ್ಲಾಘ ನೀಯ. ಇಂದಿನ ವಿದ್ಯಾರ್ಥಿಗಳು ಮೊಬೈಲ್ ಬಳಕೆಯಲ್ಲಿ ಹೆಚ್ಚು ತೊಡಗಿಸಿಕೊಂಡಿರುವ ಹಿನ್ನೆಲೆ, ಅವರಿಗೆ ಪುಸ್ತಕ ಓದುವ ಅಭಿರುಚಿ ಬೆಳೆಸಲು ಇಂತಹ ಕಾರ್ಯಕ್ರಮಗಳು ಅಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಸದಸ್ಯ ಬಿ.ಎಚ್. ನಿರಗುಡಿ ಮಾತನಾಡಿ, ಕನ್ನಡ ಪುಸ್ತಕ ಪ್ರಾಧಿಕಾರವು ಪುಸ್ತಕ ಪ್ರದರ್ಶನ,



ವಿಚಾರ ಸಂಕಿರಣ, ತಿಂಗಳ ವಿಶೇಷ ಪುಸ್ತಕ ಕಾರ್ಯಕ್ರಮಗಳು, ಪ್ರಬಂಧ ಸ್ಪರ್ಧೆಗಳು ಹಾಗೂ ರಸಪ್ರಶ್ನೆಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಶಾಲಾ-ಕಾಲೇಜುಗಳಿಗೆ ಉಚಿತವಾಗಿ ಪುಸ್ತಕಗಳನ್ನು ವಿತರಿಸುತ್ತಿದೆ ಎಂದರು.

ಗ್ರಂಥಾಲಯ ನಿರ್ಮಿಸಿದ ಡಾ. ರಾಜಶೇಖರ ಮಾಂಗ್ ಮಾತನಾಡಿ, ಸಾಹಿತ್ಯ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಸಾವಿರಾರು ಪುಸ್ತಕಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳಿಗೆ ಓದಲು ನೀಡುತ್ತಿರುವುದಾಗಿ ತಿಳಿಸಿದರು. ಮುಂದಿನ ದಿನಗಳಲ್ಲಿ ಇನ್ನಷ್ಟು ದೊಡ್ಡ ಗ್ರಂಥಾಲಯ ನಿರ್ಮಿಸುವ ಯೋಜನೆಯೂ ಇದೆ ಎಂದರು.

ಕಾರ್ಯಕ್ರಮವನ್ನು ಜಿಲ್ಲಾ ಜಾಗೃತಿ ಸಮಿತಿಯ ಸಂಚಾಲಕಿ ಡಾ. ಶೋಭಾದೇವಿ ಚೆಕ್ಕಿ ನಿರ್ವಹಿಸಿದರು. ಕಲಬುರಗಿ ನಗರದಲ್ಲಿ ಸಾವಿರ ಮನೆಗಳಲ್ಲಿ ''ಮನೆಗೊಂದು ಗ್ರಂಥಾಲಯ'' ಯೋಜನೆ ಅನುಷ್ಠಾನಗೊಳಿಸುವ ಉದ್ದೇಶವಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಡಾ.ಪರ್ವಿನ್ ಸುಲ್ತಾನಾ, ರೇವಣಸಿದ್ದಪ್ಪ ದುಕಾನ, ಶ್ರೀಶೈಲ ಮದಾನೆ, ಆನಂದ್ ಕೊಡೇಕಲ್, ವಿಜಯಕುಮಾರ್ ರಾವೂರ್, ಅರುಣಕುಮಾರ ಪಾಂಡವ, ಧೂಳಪ್ಪ ದ್ಯಾಮನರ್ಕ, ಭೀಮೇಶ್ವರಿ ಮಾಂಗ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

2027ರ ವೇಳೆಗೆ ಬಳ್ಳಾರಿ ಜಿಲ್ಲೆಯನ್ನು ಮಲೇರಿಯಾ ಮುಕ್ತವಾಗಿಸಲು ಸಂಕಲ್ಪ ಮಾಡೋಣ: ಡಾ.ಮರಿಯಂಬಿ ವಿ.ಕೆ

ಬಳ್ಳಾರಿ,ಏ.28-

''ಮಲೇರಿಯಾ ಅಂತ್ಯಗೊಳಿಸಲು ಸಂಕಲ್ಪ ಮಾಡೋಣ; ಇದು ನಮ್ಮಿಂದ ಸಾಧ್ಯವಿದೆ'' ಎಂಬ ಘೋಷವಾಕ್ಯದೊಂದಿಗೆ ಜಿಲ್ಲೆಯನ್ನು 2027ರ ವೇಳೆಗೆ ಮಲೇರಿಯಾ ಮುಕ್ತಗೊಳಿಸಲು ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ಜಿಲ್ಲಾ ವಿಬಿಡಿಸಿ ಅಧಿಕಾರಿಗಳಾದ ಡಾ.ಮರಿಯಂಬಿ ವಿ.ಕೆ ಅವರು ಹೇಳಿದರು.

ವಿಶ್ವ ಮಲೇರಿಯಾ ದಿನಾಚರಣೆ-2026ರ ಅಂಗವಾಗಿ ಸೋಮವಾರ ನಗರದ ಬಂಡಿಹಟ್ಟಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಉದ್ಘಾಟನಾ ಕಾರ್ಯಕ್ರಮ ಹಾಗೂ ಜಾಗೃತಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮಲೇರಿಯಾ ಪ್ಲಾಸ್ಮೋಡಿಯಂ ಎಂಬ ಪರಾವಲಂಬಿ ಸೂಕ್ಷ್ಮ ಜೀವಿಯಿಂದ ಉಂಟಾಗುತ್ತದೆ. ಇದು ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಚ್ಚುವಿಕೆಯಿಂದ ಹರಡುತ್ತದೆ. ಚಳಿ, ನಡುಕ, ಬಿಟ್ಟು ಬಿಟ್ಟು ಬರುವ ಜ್ವರ, ವಾಕರಿಕೆ ಮತ್ತು ಮೈ ಬೆವರುವುದು ಈ ರೋಗದ ಪ್ರಮುಖ



ಲಕ್ಷಣಗಳಾಗಿವೆ. ಹಾಗಾಗಿ ಯಾವುದೇ ರೀತಿಯ ಜ್ವರವಿದ್ದರೂ ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ರಕ್ತ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು.

ಮನೆಯ ಸುತ್ತಮುತ್ತ ಇಲಾಖೆ ವತಿಯಿಂದ ನಡೆಸುವ ಕೀಟನಾಶಕ ಸಿಂಪರಣೆಗೆ ಸಹಕರಿಸುವುದು. ಮಲಗುವಾಗ ಕಡ್ಡಾಯವಾಗಿ ಸೊಳ್ಳೆ ಪರದೆ ಬಳಸುವುದು ಮತ್ತು ಕಿಟಕಿಗಳಿಗೆ ಜಾಲರಿ ಅಳವಡಿಸುವುದು. ನೀರು ನಿಲ್ಲುವ ಸ್ಥಳಗಳಲ್ಲಿ ಲಾರ್ವಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಬಿಡುವ ಮೂಲಕ ಸೊಳ್ಳೆಗಳ ಉತ್ಪತ್ತಿ ತಡೆಯುವುದು ಸೇರಿದಂತೆ ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ಕಾರ್ಯಗಳಿಗೆ ಸಹಕರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಿಬಿಡಿಸಿ ಸಮಾಲೋಚಕ ಪ್ರತಾಪ್.ಹೆದ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಬಂಡಿಹಟ್ಟಿ ವೈದ್ಯಾಧಿಕಾರಿಗಳಾದ ಡಾ.ಯಾಸ್ಮಿನ್, ಡಾ.ಫಾಮಿದಾ ಭಾನು, ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಷಿದ್ ಬೇಗಮ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ನಾಗೇಂದ್ರಪ್ಪ, ಮರಿಬಸವನಗೌಡ, ನಾಗರಾಜ್, ಬಾಬುರಾವ್ ಹಾಗೂ ಬಳ್ಳಾರಿ ತಾಲ್ಲೂಕಿನ ಆರೋಗ್ಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಜಾಗೃತಿ ಜಾಥಾದಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.



ಸವಾಲುಗಳನ್ನು ಮೆಟ್ಟಿ ನಿಲ್ಲಲು ಜ್ಞಾನ ಸಂಪಾದನೆ ಅಗತ್ಯ: ಸಿದ್ದರಾಮ ಸಿತನೂರ

ಕಲಬುರಗಿ,ಏ.28-

ವಿಶೇಷ ಚೇತನರು ಸಂಘಟನೆ ಮೂಲಕ ತಮ್ಮ ಹಕ್ಕುಗಳನ್ನು ಪಡೆದು ಸಮಾಜದಲ್ಲಿ ಗೌರವಯುತ ಬದುಕು ಕಟ್ಟಿಕೊಳ್ಳಬೇಕು ಎಂದು ನವ ಕಲ್ಯಾಣ ಜ್ಯೋತಿ ಜನಪರ ವೇದಿಕೆಯ ರಾಜ್ಯಾಧ್ಯಕ್ಷ ಸಿದ್ದರಾಮ ಸಿತನೂರ ಹೇಳಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘಟನೆ ಶಕ್ತಿಯಿಂದ ಜಾಗೃತರಾಗಿ ಸಾಂವಿಧಾನಿಕ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿಶೇಷ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಪ್ರಕಾಶ್ ಭಜಂತ್ರಿ ಮಾತನಾಡಿ, ವಿಶೇಷ ಚೇತನರು ಯಾರಿಗಿಂತಲೂ ಕಡಿಮೆ ಇಲ್ಲ. ತಮ್ಮ ಜ್ಞಾನ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಂಡು ಗೌರವಯುತ ಬದುಕು ಕಟ್ಟಿಕೊಳ್ಳಬೇಕು ಎಂದರು.

ತಮ್ಮ ಹಕ್ಕುಗಳ ರಕ್ಷಣೆಗೆ ಲಭ್ಯವಿರುವ ಕಾನೂನುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾಧ್ಯಕ್ಷ ಸೋಮಶೇಖರ, ಶಿವಾನಂದ ಕಾಂಬಳೆ, ಮಾನಪ್ಪ ದೊಡ್ಡಮನಿ, ಸಂಗಣ್ಣ ಡಿ.ಕೆ., ಶ್ವೇತಾ ಗಾಜರೆ, ಅನುಸುಯಾ, ಪ್ರಿಯಾಂಕಾ ಕೊರಿ, ಅರುಣ್ ಕುಮಾರ್ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಬೀರಣ್ಣ ನಿರೂಪಿಸಿದರು. ಪ್ರಾಥಮಿಕವಾಗಿ ಜೈಹಿರ್ ಖಾನ್ ಮಾತನಾಡಿದರು. ಪರುಶುರಾಮ ವಂದಿಸಿದರು.

ತಳವಾರ ಸಮುದಾಯಕ್ಕೆ ಎಸ್‌ಟಿ ಪ್ರಮಾಣ ಪತ್ರ ನೀಡಲು ಆಗ್ರಹಿಸಿ ಬೃಹತ್ ಪ್ರತಿಭಟನೆ

ಕಲಬುರಗಿ,ಏ.28-

ತಳವಾರ ಸಮುದಾಯದ ಜನರಿಗೆ ಪರಿಶಿಷ್ಟ ಪಂಗಡ (ಎಸ್‌ಟಿ) ಪ್ರಮಾಣ ಪತ್ರ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ತಳವಾರ ಸಮಾಜದ ವತಿಯಿಂದ ನಗರದ ಜಗತ್ ಸರ್ಕಲ್‌ನಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಅರ್ಹ ತಳವಾರ ಸಮುದಾಯಕ್ಕೆ ಎಸ್‌ಟಿ ಪ್ರಮಾಣ ಪತ್ರ ನೀಡುವ ವಿಚಾರದಲ್ಲಿ ರಾಜಕೀಯ ಮಾಡಲಾಗುತ್ತಿದೆ ಎಂದು ಆರೋಪಿಸಿದ ಮುಖಂಡರು, ಪ್ರತಿಭಟನೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಜಿಲ್ಲಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದ 29 ಜಿಲ್ಲೆಗಳಲ್ಲಿ ತಳವಾರ ಸಮಾಜಕ್ಕೆ ಎಸ್‌ಟಿ ಪ್ರಮಾಣ ಪತ್ರ ನೀಡಲಾಗುತ್ತಿದೆ. ಆದರೆ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಉದ್ದೇಶಪೂರ್ವಕವಾಗಿ ಸೌಲಭ್ಯ ತಡೆಹಿಡಿಯಲಾಗಿದೆ ಎಂದು ದೂರಿದರು.

2020ರಲ್ಲಿ ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ತಳವಾರ ಸಮಾಜವನ್ನು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿಸಿ ಸೌಲಭ್ಯಗಳನ್ನು ನೀಡಲಾಗಿತ್ತು. ಆದರೆ ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ಸರ್ಕಾರ ಏಕಾಏಕಿ ತಡೆಹಿಡಿದಿದೆ ಎಂದು ಆರೋಪಿಸಿದರು.

ಲೋಕಸಭಾ ಚುನಾವಣೆಯಲ್ಲಿ ರಾಧಾಕೃಷ್ಣ ದೊಡ್ಡಮನಿ ಗೆದ್ದ ಬಳಿಕ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಎಸ್‌ಟಿ ಪ್ರಮಾಣ ಪತ್ರ, ಸಿಂಧುತ್ವ ಪ್ರಮಾಣ ಪತ್ರ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ತಡೆಹಿಡಿಯಲಾಗಿದೆ ಎಂದು ಮುಖಂಡರು ಆರೋಪಿಸಿದರು.

ಇದರಿಂದ ಉದ್ಯೋಗಾಕಾಂಕ್ಷಿಗಳು,



ವಿದ್ಯಾರ್ಥಿಗಳು ಉದ್ಯೋಗ, ಶಿಕ್ಷಣ ಹಾಗೂ ಇತರೆ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಾಜದ ರಾಜ್ಯಾಧ್ಯಕ್ಷ ಸರ್ದಾರ ರಾಯಪ್ಪ ಮಾತನಾಡಿ, ಕಲಬುರಗಿಯಲ್ಲಿ ಖಾಸಗಿ ಸರ್ಕಾರವಿದೆಯೋ, ನಿಜಾಂಶಾಹಿ ಸರ್ಕಾರವಿದೆಯೋ ಅಥವಾ ಪ್ರತ್ಯೇಕ ಸರ್ಕಾರವಿದೆಯೋ ಗೊತ್ತಾಗುತ್ತಿಲ್ಲ. ಎಸ್‌ಟಿ ಪ್ರಮಾಣ ಪತ್ರ ಸಿಗದೆ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ. ಸರ್ಕಾರಿ ಉದ್ಯೋಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಿಂಧುತ್ವ ಸೌಲಭ್ಯವೂ ನೀಡುತ್ತಿಲ್ಲ ಎಂದು ದೂರಿದರು.

ಜೆಡಿಎಸ್ ಮುಖಂಡ ಶಿವಕುಮಾರ್ ನಾಟಿಕಾರ್ ಮಾತನಾಡಿ, ಕೇಂದ್ರ ಸರ್ಕಾರ 2020ರಲ್ಲಿ ತಳವಾರ ಹಾಗೂ ಪರಿವಾರ ಸಮುದಾಯವನ್ನು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿಸಿದೆ. ಬಳಿಕ ರಾಜ್ಯ ಸರ್ಕಾರ ಆದೇಶ ಹೊರಡಿಸಿ ಪ್ರಮಾಣ ಪತ್ರ ನೀಡಲು ಅವಕಾಶ ಮಾಡಿಕೊಟ್ಟಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ಕಲಬುರಗಿಯಲ್ಲಿ ಪ್ರಮಾಣ ಪತ್ರ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಮಾಜದ ರಾಜ್ಯಾಧ್ಯಕ್ಷ ಸರ್ದಾರ ರಾಯಪ್ಪ, ಶಿವಕುಮಾರ್ ನಾಟಿಕರ, ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಅವ್ವಣ್ಣ ಮ್ಯಾಕೇರಿ, ಕೊಟ್ಟೂರೇಶ್ವರ ಸ್ವಾಮೀಜಿ, ಗುರುದಾಸ ದಂಗಾಪುರ, ನಿರಂಜನ ಚೈತನ್ಯ ಬೆಂಗಳೂರು, ಬಸವರಾಜ ಬೂದಿಹಾಳ, ಸಂತೋಷ ಬೆಣ್ಣೂರ, ಸಂತೋಷ ತಳವಾರ, ಶಾಂತಪ್ಪ ಕೂಡಿ, ಅನಿಲ್ ಕೂಡಿ, ಶಿವಶರಣ ಬೆಣ್ಣೂರ, ಚಂದ್ರಕಾಂತ ಜಮಾದಾರ, ಈರಣ್ಣ ಕಿರಸಾವಳಗಿ, ಬಾಪುಗೌಡ ಮಾಲಿಪಾಟೀಲ್, ಸಿದ್ದು ಯಲಬಾ ನಾರಾಯಣಪುರ, ಅಶೋಕ ಕಂಕಿ, ಭೀಮರಾಯ ತಳವಾರ, ಬಾಬು ಎಸ್.ಹಯ್ಯಾಳಿ, ರೇವಣಸಿದ್ದಗೌಡ ಕಮಾನಮನಿ, ಸಂಗಣ್ಣ ಇಟಗಾ, ಪ್ರೇಮ್ ಕೋಳಿ, ವಸಂತರಾವ, ಚಿದಂಬರ, ವಿದ್ಯಾಧರ ಮಂಗಳೂರ, ಗುರು ಜೈನಾಪುರ, ಮೈಲಾರಿ ಗೂಡುರ, ಮಾರಾಯ ಅಗಸಿ ಸೇರಿದಂತೆ ಸೇರಿದಂತೆ ಸಮುದಾಯದ ವಿವಿಧ ಸ್ವಾಮೀಜಿಗಳು ಪಾಲ್ಗೊಂಡಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಜಯಂತೋತ್ಸವಕ್ಕೆ ಸಮಿತಿ ರಚನೆ

ಜೇವರ್ಗಿ,ಏ.28-

ಮಹಾನ್ ಸಮಾಜ ಸುಧಾರಕ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತೋತ್ಸವವನ್ನು ಮೇ 17ರಂದು ಅದ್ದೂರಿಯಾಗಿ ಆಚರಿಸಲು ಪಟ್ಟಣದಲ್ಲಿ ಸಮಿತಿಯನ್ನು ರಚಿಸಲಾಗಿದೆ ಎಂದು ಮುಖಂಡರು ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳ ಆಯ್ಕೆ ಕುರಿತು ಮಾಹಿತಿ ನೀಡಲಾಯಿತು.

ಸಮಿತಿಯ ಗೌರವ ಅಧ್ಯಕ್ಷರಾಗಿ ಶಾಂತಪ್ಪ ಯಲಗೋಡ ಹಾಗೂ ಅಧ್ಯಕ್ಷರಾಗಿ ಪುಂಡಲೀಕ ಗಾಯಕವಾಡ ಅವರನ್ನು ಆಯ್ಕೆ ಮಾಡಲಾಗಿದೆ.

ಉಪಾಧ್ಯಕ್ಷರಾಗಿ ಸಂತೋಷ ಚನ್ನೂರು, ಮಹಾದೇವ ಕೊಳಕೂರು, ಶ್ರೀಮಂತ ಧನಕರ, ಶ್ರೀಶೈಲ ಮಂದೇವಾಳ, ವಿಶ್ವರಾಜ ಗಾಂವಾರ, ಸಿದ್ದು ಕೇರುರ್ ಹಾಗೂ ಜಗದೇವ ಜಟ್ನಾಕರ್ ಅವರನ್ನು ನೇಮಕ ಮಾಡಲಾಗಿದೆ.

ಪ್ರಧಾನ ಕಾರ್ಯದರ್ಶಿಯಾಗಿ ದವಲಪ್ಪ ಮದನಕರ ಆಯ್ಕೆಯಾಗಿದ್ದು, ಕಾರ್ಯದರ್ಶಿಗಳಾಗಿ ಶಿವಶರಣ ಮಾರಡಗಿ, ಮಾಪಣ್ಣ ಕಟ್ಟೆ ಹಾಗೂ ಸುರೇಶ್ ಡುಗನಕರ ಅವರನ್ನು ನೇಮಿಸಲಾಗಿದೆ. ಖಜಾಂಚಿಯಾಗಿ ರವಿಕುಮಾರ ಕುಳಗೇರಿ ಆಯ್ಕೆಯಾಗಿದ್ದಾರೆ ಎಂದು ಮುಖಂಡರು ತಿಳಿಸಿದ್ದಾರೆ.

ಸಲಹಾ ಸಮಿತಿಯಲ್ಲಿ ಚಂದ್ರಶೇಖರ್ ಹರನಾಳ, ಮರೆಪ್ಪ ಬಡಿಗೇರ, ಶಾಂತಪ್ಪ ಕುಡಲಗಿ, ಸುಭಾಷ್ ಚನ್ನೂರು, ಭೀಮರಾಯ ನಾಗನೂರು, ಮಲ್ಲಣ್ಣ ಕೊಡಚಿ ಸೇರಿದಂತೆ ಹಲವರು ಸ್ಥಾನ ಪಡೆದಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಚಂದ್ರಶೇಖರ್ ಹರನಾಳ, ಮರೆಪ್ಪ ಬಡಿಗೇರ, ಶಾಂತಪ್ಪ ಕುಡಲಗಿ, ಮುಖಂಡರಾದ ಸುಭಾಷ್ ಚನ್ನೂರು, ಮಲ್ಲಣ್ಣ ಕೊಡಚಿ, ಶಾಂತಪ್ಪ ಯಲಗೋಡ, ಪುಂಡಲೀಕ ಗಾಯಕವಾಡ, ಹರಿಚಂದ್ರ ಕೊಡಚಿ, ರಾಯಪ್ಪ ಬರಿಗಿಡ, ಶ್ರೀಮಂತ ಧನಕರ, ದವಲಪ್ಪ ಮದನಕರ, ಸಿದ್ರಾಮ ಕಟ್ಟೆ, ವಿಶ್ವರಾಜ ಗಾಂವಾರ, ಸಿದ್ದು ಕೇರುರ, ಶ್ರೀಹರಿ ಕರಕಳ್ಳಿ, ಶಿವಶರಣ ಮಾರಡಗಿ, ಸಿದ್ದು ಜನಿವಾರ, ಸಂತೋಷ ಚನ್ನೂರು, ಸುರೇಶ್ ಡುಗನಕರ, ಮಾಪಣ್ಣ ಕಟ್ಟೆ, ಭೀಮಾಶಂಕರ ಬಡಿಗೇರ, ಭೀಮರಾಯ ಬಳ್ಳಬಟ್ಟಿ, ಬಾಗಣ್ಣ ಕಟ್ಟೆ, ಗುರುಲಿಂಗಪ್ಪಗೂಡೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಶಿವದಾಸ್ ಘೋಷ್ ಚಿಂತನೆಗಳಿಂದಲೇ ಸಮಾಜವಾದಿ ಕ್ರಾಂತಿ ಸಾಧ್ಯ : ಕೆ. ಸೋಮಶೇಖರ್

ಕಲಬುರಗಿ,ಏ.28-

ಜಗತ್ತಿನಾದ್ಯಂತ ಬಂಡವಾಳಶಾಹಿ ವ್ಯವಸ್ಥೆ ಗಂಭೀರ ಬಿಕ್ಕಟ್ಟಿನಲ್ಲಿದ್ದು, ಸಾಮ್ರಾಜ್ಯಶಾಹಿ ಶಕ್ತಿಗಳ ಯುದ್ಧ ನೀತಿಗಳು ಸಾಮಾನ್ಯ ಜನರ ಬದುಕನ್ನು ಸಂಕಷ್ಟಕ್ಕೆ ತಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಸಮಾಜವನ್ನು ಪರಿವರ್ತಿಸಲು ಮಹಾನ್ ಮಾರ್ಕ್ಸ್‌ವಾದಿ ಚಿಂತಕ ಶಿವದಾಸ್ ಘೋಷ್ ಅವರ ಸೈದ್ಧಾಂತಿಕ ಮಾರ್ಗದರ್ಶನ ಅಗತ್ಯವಾಗಿದೆ ಎಂದು ಎಸ್‌ಯುಸಿಐ (ಸಿ) ಪಕ್ಷದ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯ ಕೆ. ಸೋಮಶೇಖರ್ ಅಭಿಪ್ರಾಯಪಟ್ಟರು.

ನಗರದ ಈಶ್ವರಚಂದ್ರ ವಿದ್ಯಾಸಾಗರ ಭವನದಲ್ಲಿ ನಡೆದ ಎಸ್‌ಯುಸಿಐ (ಸಿ) ಪಕ್ಷದ 78ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡಿದರು.

ಪಕ್ಷದ ಇತಿಹಾಸವನ್ನು ಸ್ಮರಿಸಿದ ಅವರು, 1948ರ ಏಪ್ರಿಲ್ 24ರಂದು ಶಿವದಾಸ್ ಘೋಷ್ ಅವರು ನೈಜ ಕಮ್ಯುನಿಸ್ಟ್ ತತ್ವದ ಆಧಾರದ ಮೇಲೆ ಎಸ್‌ಯುಸಿಐ (ಸಿ) ಪಕ್ಷವನ್ನು ಸ್ಥಾಪಿಸಿದ್ದನ್ನು ಉಲ್ಲೇಖಿಸಿದರು. ಇತರ ಕಮ್ಯುನಿಸ್ಟ್ ಪಕ್ಷಗಳು ಹೋರಾಟದ ಸರಿಯಾದ ದಿಕ್ಕಿನಲ್ಲಿ ಸಾಗಲು ವಿಫಲವಾದ ಸಂದರ್ಭದಲ್ಲಿ, ಈ ಪಕ್ಷವು



ಕಾರ್ಮಿಕರು ಹಾಗೂ ಶೋಷಿತರ ಧ್ವನಿಯಾಗಿ ಬೆಳೆಯಿತು ಎಂದು ಹೇಳಿದರು.

ಜಾಗತಿಕ ರಾಜಕೀಯ ಬೆಳವಣಿಗೆಗಳನ್ನು ಉಲ್ಲೇಖಿಸಿದ ಅವರು, ಗಾಜಾದಲ್ಲಿ ನಡೆಯುತ್ತಿರುವ ಹಿಂಸಾಚಾರ ಜಾಗತಿಕ ಶಾಂತಿಗೆ ಧಕ್ಕೆ ತಂದಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ ಸೇರಿದಂತೆ ಹಲವು ದೇಶಗಳಲ್ಲಿ ನಡೆಯುತ್ತಿರುವ ಜನ ಹೋರಾಟಗಳು

ಸ್ಫೂರ್ತಿದಾಯಕ ವಾಗಿದ್ದರೂ, ಸ್ಪಷ್ಟ ಸಿದ್ಧಾಂತ ಮತ್ತು ನಾಯಕತ್ವದ ಕೊರತೆಯಿಂದ ಗುರಿ ತಲುಪುತ್ತಿಲ್ಲ ಎಂದು ವಿಶ್ಲೇಷಿಸಿದರು.

''ನೈಜ ಕಮ್ಯುನಿಸ್ಟ್ ಪಕ್ಷದ ಕೊರತೆಯಿಂದ ಅನೇಕ ಹೋರಾಟಗಳು ದಾರಿ ತಪ್ಪುತ್ತಿವೆ. ಇಂತಹ ಸಂದರ್ಭದಲ್ಲಿ ಶಿವದಾಸ್ ಘೋಷ್ ಅವರ ವಿಚಾರಧಾರೆ ಮಾತ್ರವೇ ಜನತೆಗೆ ದಿಕ್ಕು ತೋರಿಸಬಲ್ಲದು,'' ಎಂದು ಹೇಳಿದರು.

ದೇಶದ ವಿವಿಧ ಸಮಸ್ಯೆಗಳಿಗೆ ಸಮಾಜವಾದಿ ಕ್ರಾಂತಿಯೇ ಅಂತಿಮ ಪರಿಹಾರ ಎಂದು ಅಭಿಪ್ರಾಯಪಟ್ಟರು.

ಯುವಜನರ ಸ್ಥಿತಿಗತಿಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ದುಶ್ಚಟಗಳು ಮತ್ತು ಸಾಂಸ್ಕೃತಿಕ ಕುಸಿತದಿಂದ ಯುವಜನರ ಹೋರಾಟದ ಮನೋಭಾವ ಕುಂದುತ್ತಿದೆ ಎಂದು ಎಚ್ಚರಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳನ್ನೂ ಟೀಕಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಆರ್.ಕೆ.ವೀರಭದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಗೆ ರಾಮಣ್ಣ ಇಬ್ರಾಹಿಂಪುರ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಎಂ.ಶಶಿಧರ್ ವಿ.ನಾಗಮ್ಮಾಳ್, ಗಣಪತರಾವ್ ಕೆ. ಮಾನೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮವು ಶಿವದಾಸ್ ಘೋಷ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಆರಂಭಗೊಂಡು, ಅಂತಾರಾಷ್ಟ್ರೀಯ ಗೀತೆಯೊಂದಿಗೆ ಸಮಾಪ್ತಿಯಾಯಿತು.

ವಸತಿ ಶಾಲೆ ಹಾಗೂ ಪಿಯು ವಿಜ್ಞಾನ ಕಾಲೇಜು ಪ್ರವೇಶಾತಿಗೆ ಅರ್ಜಿ ಆಹ್ವಾನ


ಬಳ್ಳಾರಿ,ಏ.28-

ಸಂಡೂರು ತಾಲ್ಲೂಕಿನ ವಡ್ಡಿನಕಟ್ಟೆ ಗ್ರಾಮದಲ್ಲಿರುವ ಪರಿಶಿಷ್ಟ ವರ್ಗದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಹಾಗೂ ಉನ್ನತೀಕರಿಸಿದ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ (ವಿಜ್ಞಾನ ವಿಭಾಗ) ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಧಿಕೃತ ವೆಬ್‌ಸೈಟ್ http://kreis.karnataka.gov.in ಗೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಸಲು ಏ.29 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರಾಂಶುಪಾಲರಾದ ಶಂಕ್ರಪ್ಪ ಚಲವಾದಿ (ಮೊ.9611279510) ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದ್ದಿನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಬಸವ ಜಯಂತಿ : ವಚನ-ನೈಜ ಗದ್ಯಾನುವಾದ ಗ್ರಂಥ ಬಿಡುಗಡೆ



ಕಲಬುರಗಿ,ಏ.28-

ವಿಶ್ವ ಬಸವ ಜಯಂತಿ ಅಂಗವಾಗಿ ಕಲಬುರಗಿ ಬಸವ ಸಮಿತಿ, ಅನುಭಾವ ಮಂಟಪ ಹಾಗೂ ಡಾ. ಬಿ.ಡಿ. ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ 2500 ವಚನಗಳ ಕನ್ನಡ ಆವೃತ್ತಿಯ ''ವಚನ ನೈಜ ಗದ್ಯಾನುವಾದ'' ಎರಡು ಸಂಪುಟಗಳ ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ಬೆಂಗಳೂರು ಕೇಂದ್ರ ಬಸವ ಸಮಿತಿಯ ಅಧ್ಯಕ್ಷ ಡಾ. ಅರವಿಂದ ಜತ್ತಿ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿ,

ಬಸವ ತತ್ವದ ಪ್ರಚಾರವೇ ತಮ್ಮ ಜೀವನದ ಧ್ಯೇಯವಾಗಿದ್ದು, ಜಗತ್ತಿನ 38 ಭಾಷೆಗಳಿಗೆ ವಚನಗಳನ್ನು ಅನುವಾದಿಸುವ ಮಹತ್ವದ ಕಾರ್ಯ ಸಾಧಿಸಲಾಗಿದೆ ಎಂದು ಹೇಳಿದರು.

ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ, ಫ್ರಾನ್ಸ್ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಬಸವ ಅಭಿಮಾನಿಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿಯೊಬ್ಬರೂ ಪ್ರತಿದಿನ ಲಿಂಗಪೂಜೆ ನೆರವೇರಿಸಿ ವಚನಗಳನ್ನು ಅಧ್ಯಯನ ಮಾಡಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಬಸವ ಸಮಿತಿಗೆ ಸತತವಾಗಿ 6ನೇ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ಅರವಿಂದ ಜತ್ತಿ ಅವರಿಗೆ ಸನ್ಮಾನಿಸಲಾಯಿತು.

ನೈಜ ಗದ್ಯಾನುವಾದ ಕೃತಿಯ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ದಂಡೆ ಮಾತನಾಡಿ, ವಚನಕಾರರ ಮೂಲ ಆಶಯವನ್ನು ಯಾವುದೇ ವಿವರಣೆ ಇಲ್ಲದೆ ನೇರವಾಗಿ ಜನರಿಗೆ ತಲುಪಿಸುವ ಉದ್ದೇಶದಿಂದ ಈ ಕೃತಿ ರೂಪುಗೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ. ವಿಲಾಸವತಿ ಖೂಬಾ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಜಯಶ್ರೀ ದಂಡೆ ಸ್ವಾಗತಿಸಿ ಪ್ರಸ್ತಾವಿಕ ಭಾಷಣ ಮಾಡಿದರು. ಗದ್ಯಾನುವಾದಕರಾದ ಡಾ. ಶ್ರೀಕಾಂತ್ ಪಾಟೀಲ್ ಹಾಗೂ ಡಾ. ಚಿತ್ಕಲಾ ಮಠಪತಿ ಉಪಸ್ಥಿತರಿದ್ದರು.

ಇದೇ ವೇಳೆ ಉದ್ಯಮಿ ರಾಜೇಂದ್ರ ಖೂಬಾ, ಅಮರನಾಥ ಪಾಟೀಲ, ಕಾರ್ಯದರ್ಶಿ ಡಾ. ಆನಂದ ಪಾಟೀಲ ಸಿದ್ದಾಮಣಿ, ಡಾ. ಕೆ.ಎಸ್. ವಾಲಿ, ಶರಣಗೌಡ ಪಾಟೀಲ್ ಪಾಳ, ಉದ್ದಂಡಯ್ಯ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಮೋದಿ-ದೀದಿ ಕೊನೆ ಫೈಟ್ : ಇಂದು ಪಶ್ಚಿಮ ಬಂಗಾಳದಲ್ಲಿ 2ನೇ ಹಂತದ ಮತದಾನ

ಅಂತಿಮ ಸುತ್ತಾಗಿಲ್ಲ. ಇದು ಆಡಳಿತ ವಿರೋಧಿ ಅಲೆ, ಭ್ರಷ್ಟಾಚಾರ ಆರೋಪಗಳು ಮತ್ತು ಪೌರತ್ವ ರಾಜಕೀಯವು ಆಡಳಿತ ಪಕ್ಷದ ಬಲಿಷ್ಠ ಗೋಡೆಯನ್ನು ಮುರಿಯಬಹುದೇ ಎಂಬುದರ ನಿಜವಾದ ಪರೀಕ್ಷೆಯಾಗಿದೆ.

ಟಿಎಂಸಿಗೆ, ಈ ಪಟ್ಟಿಯನ್ನು ಹಿಡಿದಿಟ್ಟುಕೊಳ್ಳುವುದು ಎಂದರೆ ನಾಲ್ಕನೇ ನೇರ ಅವಧಿಗೆ ಹಾದಿ ದೃಢವಾಗಿ ತೆರೆದಿರುತ್ತದೆ.ಇದು ಯಾವಾಗಲೂ ನಮ್ಮ ಬಲಿಷ್ಠ ವಲಯವಾಗಿದೆ. 2021 ರಲ್ಲಿ ಮತ್ತು 2024 ರ ಲೋಕಸಭಾ ಚುನಾವಣೆಗಳಲ್ಲಿಯೂ ಸಹ, ಇಲ್ಲಿನ ಜನರು ನಮ್ಮೊಂದಿಗೆ ನಿಂತರು. ನಾವು ಈ ಪಟ್ಟಿಯನ್ನು ಉಳಿಸಿಕೊಂಡರೆ, ಬಂಗಾಳವು ಮಮತಾ ಬ್ಯಾನರ್ಜಿಯೊಂದಿಗೆ ಇರುತ್ತದೆ ಎಂದು ಟಿಎಂಸಿಯ ಹಿರಿಯ ನಾಯಕಿಯೊಬ್ಬರು ಹೇಳಿದರು.

ಉತ್ತರ 24 ಪರಗಣಗಳು ಮಾತ್ರ 33 ಸ್ಥಾನಗಳನ್ನು ಹೊಂದಿವೆ, ದಕ್ಷಿಣ 24 ಪರಗಣಗಳು 31, ಹೌರಾ 16, ನಾಡಿಯಾ 17, ಹೂಗ್ಲಿ 18, ಪುರ್ಬಾ ಬರ್ಧಮಾನ್ 16, ಆದರೆ ಕೋಲ್ಕತ್ತಾದ 11 ಸ್ಥಾನಗಳು ಸಾಂಕೇತಿಕವಾಗಿ ಅತ್ಯಂತ ಪ್ರತಿಷ್ಠಿತವಾಗಿವೆ.ಉತ್ತರ ಮತ್ತು ದಕ್ಷಿಣ 24 ಪರಗಣಗಳು ಆ ಸ್ಪರ್ಧೆಯ ಕೇಂದ್ರಬಿಂದುವಾಗಿ ಉಳಿದಿವೆ ಇದನ್ನು ರಾಜ್ಯ ರಾಜಕಾರಣಿಗಳು ಸಾಮಾನ್ಯವಾಗಿ ಬಂಗಾಳದ ಚುನಾವಣಾ ನಕ್ಷೆಯ ಉತ್ತರ ಪ್ರದೇಶ ಎಂದು ಕರೆಯುತ್ತಾರೆ, ಇವುಗಳ ಚುನಾವಣಾ ತೂಕವು ನಬನ್ನಾದಲ್ಲಿ ಅಧಿಕಾರವನ್ನು ಮಾಡಬಹುದು ಅಥವಾ ರದ್ದುಗೊಳಿಸಬಹುದು ಎಂಬ ಅವಳಿ ಜಿಲ್ಲೆಗಳಾಗಿವೆ.

2021 ರಲ್ಲಿ, ಟಿಎಂಸಿ ಕೋಲ್ಕತ್ತಾದ ಎಲ್ಲಾ 11 ಸ್ಥಾನಗಳನ್ನು, ಹೌರಾದಲ್ಲಿ ಎಲ್ಲಾ 16 ಸ್ಥಾನಗಳನ್ನು, ದಕ್ಷಿಣ 24 ಪರಗಣಗಳಲ್ಲಿ 31 ರಲ್ಲಿ 30 ಸ್ಥಾನಗಳನ್ನು, ಉತ್ತರ 24 ಪರಗಣಗಳಲ್ಲಿ 33 ರಲ್ಲಿ 28 ಸ್ಥಾನಗಳನ್ನು, ಹೂಗ್ಲಿಯಲ್ಲಿ 18 ರಲ್ಲಿ 14 ಸ್ಥಾನಗಳನ್ನು ಮತ್ತು ನಾಡಿಯಾದಲ್ಲಿ 17 ರಲ್ಲಿ ಎಂಟು ಸ್ಥಾನಗಳನ್ನು ಗೆದ್ದಿತು.

2021 ರ ಚುನಾವಣೆಯ ನಂತರದ ಹಿಂಸಾಚಾರದ ಹಿನ್ನೆಲೆಯಲ್ಲಿ, ಚುನಾವಣೆಯ ನಂತರ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು 60 ದಿನಗಳ ಕಾಲ ಬಂಗಾಳದಲ್ಲಿ ಉಳಿಯುತ್ತವೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ವ್ಯಾಪಕವಾಗಿ ಓದಲಾಯಿತು. ಈ ಸಂದರ್ಭದಲ್ಲಿ ವಿರೋಧ ಪಕ್ಷದ ಕಾರ್ಯಕರ್ತರ ಕೊಲೆಗಳು, ಬೆಂಕಿ ಹಚ್ಚುವಿಕೆ, ಹಲ್ಲೆಗಳು ಮತ್ತು ಸ್ಥಳಾಂತರದ ಆರೋಪಗಳು ರಾಜಕೀಯ ಚರ್ಚೆಯಲ್ಲಿ ಪ್ರಾಬಲ್ಯ ಸಾಧಿಸಿದವು.

ಟಿಎಂಸಿ ವಿರೋಧಿ ಮತದಾರರು ಆಡಳಿತ ಪಕ್ಷದ ವಿರುದ್ಧ ಮತ ಚಲಾಯಿಸಿದರೆ ಚುನಾವಣೆಯ ನಂತರದ ಪ್ರತೀಕಾರ ಕ್ರಮಗಳು ಅನುಸರಿಸುವುದಿಲ್ಲ ಎಂದು ಭರವಸೆ ನೀಡುವ ಗುರಿಯನ್ನು ಈ ಸಂದೇಶ ಹೊಂದಿದೆ ಎಂದು ರಾಜಕೀಯ ವೀಕ್ಷಕರು ಹೇಳಿದ್ದಾರೆ.ಟಿಎಂಸಿ ಇದನ್ನು ಭೀತಿಯ ರಾಜಕೀಯ ಎಂದು ತಳ್ಳಿಹಾಕಿತು, ಬಿಜೆಪಿ ದೆಹಲಿಯಿಂದ ಬಂಗಾಳವನ್ನು ಓಡಿಸಲು ಪ್ರಯತ್ನಿಸುತ್ತಿದೆ ಮತ್ತು ಕೇಂದ್ರ ಸಂಸ್ಥೆಗಳು ಮತ್ತು ಸಂಸ್ಥೆಗಳನ್ನು ಶಸ್ತ್ರಸಜ್ಜಿತಗೊಳಿಸುತ್ತಿದೆ ಎಂದು ಆರೋಪಿಸಿತು.

ಟಿಎಂಸಿ ಕಲ್ಯಾಣ ರಾಜಕೀಯ ಮತ್ತು ಗುರುತಿನೊಂದಿಗೆ ಪ್ರತಿಕ್ರಿಯಿಸಿದೆ ಮತ್ತು ಚುನಾವಣೆಯನ್ನು ಬಂಗಾಳದ ಹಕ್ಕುಗಳನ್ನು ರಕ್ಷಿಸುವ ಹೋರಾಟವಾಗಿ ರೂಪಿಸಿದೆ, ಬಿಜೆಪಿಯ ಅಂತಿಮ ಆಟ ಎನ್‌ಆರ್‌ಸಿ ಮತ್ತು ಸಾಮಾಜಿಕ ವಿಭಜನೆಯಾಗಿ ಉಳಿದಿದೆ ಎಂದು ಎಚ್ಚರಿಸಿದೆ. ಮೊದಲ ಹಂತದ 93.19 ಪ್ರತಿಶತ ಮತದಾನವನ್ನು ದಾಖಲಿಸಿದ ನಂತರ ರಾಜ್ಯದಲ್ಲಿ ಇದುವರೆಗಿನ ಅತ್ಯಧಿಕ ಟಿಎಂಸಿ ಈಗಾಗಲೇ 100 ಸ್ಥಾನಗಳ ಗಡಿಯನ್ನು ದಾಟಿದೆ ಎಂದು ಬ್ಯಾನರ್ಜಿ ಹೇಳಿದ್ದಾರೆ.

ಮುಂದುವರೆಯಲು ಹೈಕಮಾಂಡ್ ಅವಕಾಶ ನೀಡಬಾರದು: ಕೆ.ಎನ್. ರಾಜಣ್ಣ

ಒಟ್ಟಾರೆ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿದ್ದಾರೆ ಎಂದು ಹೇಳಿದರು.

ನಾಯಕತ್ವ ಬದಲಾವಣೆ ವಿಚಾರ ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರವಲ್ಲ. ಅದರಲ್ಲಿ ಪಕ್ಷದ ಭವಿಷ್ಯವೂ ಅಡಗಿದೆ. ಹೀಗಾಗಿ ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಳ್ಳುವ ವಿಶ್ವಾಸವಿದೆ. ಮುಖ್ಯಮಂತ್ರಿಯವರು ರಾಹುಲ್ ಗಾಂಧಿಯವರ ಸೂಚನೆ ಪಾಲನೆ ಮಾಡುವುದಾಗಿ ಈಗಾಗಲೇ ತಿಳಿಸಿದ್ದಾರೆ ಎಂದರು.

ಅಧಿಕಾರ ಯಾರಿಗೂ ಶಾಶ್ವತವಲ್ಲ. ಒಮ್ಮೆ ಅಧಿಕಾರ ಕಳೆದುಕೊಂಡವರು ಮತ್ತೆ ಪಡೆಯುವ ಅವಕಾಶವಿರುತ್ತದೆ. ಸಿದ್ದರಾಮಯ್ಯ ಅವರನ್ನು ಮುಂದುವರಿಸಬೇಕು ಎಂಬ ನಮ್ಮ ಅಭಿಪ್ರಾಯವನ್ನು ಹೈಕಮಾಂಡ್‌ಗೆ ತಿಳಿಸಿದ್ದೇವೆ ಎಂದ ಅವರು, ದಲಿತರು ಮುಖ್ಯಮಂತ್ರಿಯಾಗಬೇಕು ಎಂಬುದಕ್ಕೆ ನಾನು ಈಗಲೂ ಬದ್ಧನಾಗಿದ್ದೇನೆ ಎಂದು ಹೇಳಿದರು.

ಅಹಿಂದ ವರ್ಗಕ್ಕೆ ನಿಜವಾಗಿಯೂ ಸಮಾಧಾನವಾಗಿಲ್ಲ. ಮೊದಲ ಅವಧಿಯ ಸಿದ್ದರಾಮಯ್ಯ ಹಾಗೂ ಈಗಿನ ಸಿದ್ದರಾಮಯ್ಯ ಅವರಲ್ಲಿ ಸಾಕಷ್ಟು ವ್ಯತ್ಯಾಸವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇನ್ನೆರಡು ವರ್ಷಗಳಲ್ಲಿ ವಿಧಾನಸಭೆ ಚುನಾವಣೆ ಎದುರಾಗಲಿದೆ. ಆ ಚುನಾವಣೆಯಲ್ಲಿ ಏನಾಗುತ್ತದೆ ಎಂಬುದನ್ನು ಈಗಲೇ ಊಹಿಸಲು ಸಾಧ್ಯವಿಲ್ಲ. ರಾಜಕಾರಣದಲ್ಲಿ ಹೆಚ್ಚಿನ ಶ್ರಮ ಅಗತ್ಯವಿದೆ ಎಂದು ರಾಜಣ್ಣ ಹೇಳಿದರು.

ಎ ವಸಂತ್ ಕುಮಾರ್‌ರಿಂದ ನಗರ ಪ್ರಾಥಮಿಕ ಅರೋಗ್ಯ ಕೇಂದ್ರಗಳಿಗೆ ದಿಡೀರ್ ಭೇಟಿ ,ಪರಿಶೀಲನೆ

ನಿರ್ವಹಿಸಲು ಅಡ್ಡಿಪಡಿಸುತ್ತಿರುವ ಬಗ್ಗೆ ತಿಳಿಸಿದಾಗ ಕೂಡಲೇ ಮತ್ತು ಪಿ ಎಸ್ ಐ ಅವರಿಗೆ ಕರೆ ಮಾಡಿ ಸೂಕ್ತ ಭದ್ರತೆ ನೀಡಲು ಸೂಚಿಸಿದರು. ರಾಯಚೂರಿನ ಆಮ್ ತಲಾಬ್ ನ ನಗರ ಪ್ರಸೂತಿ ಕೇಂದ್ರಕ್ಕೆ ಭೇಟಿ ನೀಡಿ ವೈದ್ಯರೊಂದಿಗೆ ಚರ್ಚಿಸಿ, ಸಿಬ್ಬಂದಿಗಳ ಮತ್ತು ಚಿಕಿತ್ಸಾ ಪರಿಕರಗಳ ಕೊರತೆ ಬಗ್ಗೆ ಕೂಡಲೇ ಡಿ ಎಚ್ ಓ ಅವರ ಗಮನಕ್ಕೆ ತಂದು ಈ ಇಲ್ಲಾ ಚಿಕಿತ್ಸಾ ಕೇಂದ್ರಗಳ ಸಿಬ್ಬಂದಿ ಮತ್ತು ಔಷಧಿಗಳ ಕೊರತೆ ಇರದಂತೆ ಸೂಕ್ತ ಕ್ರಮವಹಿಸಲು ಸೂಚಿಸಿದರು.

ದ್ವಿತೀಯ ಪಿಯುಸಿ ಪರೀಕ್ಷೆ-2 ಸುಸೂತ್ರವಾಗಿ ನಡೆಸಿ- ಅಪರ ಜಿಲ್ಲಾಧಿಕಾರಿ ಶಿವಾನಂದ

ಈಗಾಗಲೇ ರೂಟ್ ಆಫೀಸರ್ ಎಕ್ಸಾ ಮ ಚಿಫ್ ಸೇರಿದಂತೆ ಇತರರು ಪರೀಕ್ಷೆಗೆ ನಿಯೋಜಿತ ಎಲ್ಲರೂ ಉತ್ತಮವಾಗಿ ಕರ್ತವ್ಯ ನಿರ್ವಹಿಸಬೇಕೆಂದು ಹೇಳಿದರು.

ಈ ಸಭೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ. ಜಿಲ್ಲಾ ಖಜಾನಾಧಿಕಾರಿ ಸಿದ್ರಾಮೇಶ್ವರ. ಸೇರಿದಂತೆ ರೂಟ್ ಆಫೀಸರ. ಎಕ್ಸ ಮ್ ಚೀಫ್ ಹಾಗೂ ಇತರರು ಉಪಸ್ಥಿತರಿದ್ದರು.

ಅಹಿಂಧಾ ನಾಯಕರಿಗೆ ರಾಜಕೀಯ ಟಾರ್ಗೆಟ್ ಶಿವಪ್ಪ ಪೂಜಾರಿ ಖಂಡನೆ

ಅಹಿಂದ ಸಮುದಾಯಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಹಾನಿಕಾರಕವಾಗಿದ್ದು, ಭವಿಷ್ಯದಲ್ಲಿ ಗಂಭೀರ ರಾಜಕೀಯ ಪರಿಣಾಮಗಳನ್ನು ಉಂಟುಮಾಡುವ ಸಾಧ್ಯತೆ ಇದೆ. ಕಾಂಗ್ರೆಸ್ ಪಕ್ಷವು ತನ್ನ ಮೂಲ ಆಧಾರವಾಗಿರುವ ಅಹಿಂದ ತತ್ವವನ್ನು ಉಳಿಸಿಕೊಳ್ಳಬೇಕಾದರೆ, ಈ ವಿಚಾರವನ್ನು ತಕ್ಷಣ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ, ಕಾಂಗ್ರೆಸ್ ದೆಹಲಿಯ ಹೈಕಮಾಂಡ್ ತಕ್ಷಣ ಹಸ್ತಕ್ಷೇಪ ಮಾಡಿ, ಅಹಿಂದ ಸಮುದಾಯದ ನಾಯಕರಿಗೆ ನ್ಯಾಯ ಒದಗಿಸಬೇಕು ಹಾಗೂ ಈ ರೀತಿಯ ಟಾರ್ಗೆಟ್ ರಾಜಕೀಯಕ್ಕೆ ಕಡಿವಾಣ ಹಾಕಬೇಕು ಎಂದು ನಾವು ಆಗ್ರಹಿಸುತ್ತೇವೆ.

ಇಲ್ಲವಾದರೆ ಅಹಿಂದ ಸಮುದಾಯಗಳು ನಮ್ಮ ಸಮುದಾಯದ ನಾಯಕರ ರಕ್ಷಣೆಗಾಗಿ ದೆಹಲಿ ಮಟ್ಟದ ಹೋರಾಟಕ್ಕೆ ನಿರ್ಧಾರ ಮಾಡಲಾಗುವುದು. ''ಅಹಿಂದದ ಗೌರವ - ನಮ್ಮ ಸಂಕಲ್ಪ, ಸಾಮಾಜಿಕ ನ್ಯಾಯ - ನಮ್ಮ ಹಕ್ಕು'' ಎಂದು ಹೇಳಿದರು ಶಿವಪ್ಪ ಪೂಜಾರಿ ಜಿಲ್ಲಾ ಅಧ್ಯಕ್ಷರು ರಾಯಚೂರು

ಶಿವಣ್ಣ ಪ್ರಧಾನ ಕಾರ್ಯದರ್ಶಿ, ಬಿ.ಬಸವಯ್ಯ ಅಧ್ಯಕ್ಷರು ಬೆಂಗಳೂರು, ರಾಚೇಗೌಡ ಚಾಮರಾಜಪೇಟೆ, ಮಲ್ಲಿಕೇತ ಪ್ರಚಾರ ಸಮಿತಿ, ಸುಜಾತಾ ಮಹಿಳಾ ಅಧ್ಯಕ್ಷರು, ರೇಷ್ಮಾ ಕವಿತಾ ಪ್ರಚಾರ ಸಮಿತಿ, ಕವಿತಾ ಒಬಿಸಿ, ಮಹಮ್ಮದ್ ಅಲಿ, ತಾಹೇರಪಾಷಾ, ಭಗೀರಥಿ ವಕೀಲರು, ಮಸ್ತಿನ ಬೇಗ್ ವಕೀಲರು ಕುಮಾರಿ ಲಕ್ಷ್ಮಿ ಬೆಂಗಳೂರು ಇವರ ಸಮ್ಮುಖದಲ್ಲಿ ಪತ್ರಿಕಾಗೋಷ್ಠಿ ನಡೆಸಿದರು

ಸಾಮೂಹಿಕ ವಿವಾಹಗಳು : ಬಸನಗೌಡ ಬಾದರ್ಲಿ

ಮಹಿಳೆಯರಿಗೆ ಉಡಿ ಕಾರ್ಯಕ್ರಮ ಮತ್ತು ಉಚಿತ ಸಾಮೂಹಿಕ ವಿವಾಹಗಳ ಕಾರ್ಯಕ್ರಮದಲ್ಲಿ ಕ್ಷೇತ್ರದ ಹೆಚ್ಚಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಮನವಿ ಮಾಡಿದರು

ಈ ಸಂದರ್ಭದಲ್ಲಿ ಮುಖಂಡರಾದ ವೆಂಕಟೇಶ ರಾಗಲಪರ್ವಿ, ಶರಣಯ್ಯಸ್ವಾಮಿ ಕೋಟೆ, ಅಮರೇಶ ಗಿರಿಜಾಲಿ, ರಾಮನಗೌಡ ಕೆ.ಬಸಾಪುರು, ವೀರಬಾಬು ಸೇರಿದಂತೆ ಇತರರು ಉಪಸ್ಥಿತರಿದ್ದರು

ಪುರಸಭೆಯ ಅವ್ಯವಸ್ಥೆಗೆ ಶಾಸಕ ಪ್ರಭು ಚವ್ಹಾಣ ಆಕ್ರೋಶ



ಔರಾದ್,ಏ.28–

ಪಟ್ಟಣಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡುವಲ್ಲಿ ವಿಫಲತೆ, ಮಾಸ್ಟರ್ ಪ್ಲಾನ್ ಅನುಷ್ಠಾನದಲ್ಲಿ ವಿಳಂಬ, ಸ್ವಚ್ಛತಾ ಕಾರ್ಯಗಳ ನಿರ್ಲಕ್ಷ್ಯ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಸರಿಯಾಗಿ ಜಾರಿಗೊಳಿಸದಿರುವುದಕ್ಕೆ ಪುರಸಭೆ ಅಧಿಕಾರಿಗಳ ವಿರುದ್ಧ ಶಾಸಕ ಪ್ರಭು ಚವ್ಹಾಣ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆ ಸಭಾಂಗಣದಲ್ಲಿ ಸೋಮವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರು ಸರಬರಾಜಿಗೆ ಕೋಟ್ಯಂತರ ರೂ. ಅನುದಾನ ತಂದಿದ್ದೇನೆ. ಕಾರಂಜಾ ಜಲಾಶಯದಿಂದ ಪಟ್ಟಣಕ್ಕೆ ನೀರು ತರುವ 84 ಕೋಟಿ ರೂ. ವೆಚ್ಚದ ಯೋಜನೆ ಚಾಲ್ತಿಯಲ್ಲಿದೆ. ಆದರೆ ಕೆಲಸ ಸರಿಯಾಗಿ ನಡೆಯುತ್ತಿಲ್ಲ ಎಂದು ಗುಡುಗಿದರು.

ಮಾಂಜ್ರಾದಿಂದ ನೀರು ಸರಬರಾಜು ಮಾಡುವ ಯೋಜನೆ ಹಾಗೂ ತೇಗಂಪೂರ್ ಕೆರೆಯಿಂದ ನೀರು ಪೂರೈಕೆ ಮಾಡುವ ಯೋಜನೆಯೂ ಇದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಣ ಖರ್ಚಾಗುತ್ತಿದೆಯೇ ವಿನಃ ಜನತೆಗೆ ನೀರು ಪೂರೈಕೆಯಾಗುತ್ತಿಲ್ಲ. ಈ ರೀತಿಯ ನಿರ್ಲಕ್ಷ್ಯ ಅಸಹನೀಯ ಎಂದು ಬೇಸರ ವ್ಯಕ್ತಪಡಿಸಿದರು.

ಪಟ್ಟಣದ 20 ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಇದೆ. ಚರಂಡಿಗಳು ತುಂಬಿದ್ದು, ಓಣಿಗಳಲ್ಲಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಬ್ಲೀಚಿಂಗ್ ಪೌಡರ್ ಹಾಕುತ್ತಿಲ್ಲ. ಫಾಗಿಂಗ್ ಮಾಡುತ್ತಿಲ್ಲ. ಅಳವಡಿಸಿದ 12 ಹೈಮಾಸ್ಟ್ ದೀಪಗಳಲ್ಲಿ 10 ದೀಪಗಳು ಕೆಟ್ಟಿವೆ. ಪೌರ ಕಾರ್ಮಿಕರ 18 ತಿಂಗಳ ವೇತನ ಪಾವತಿಸಿಲ್ಲ. ಎಪಿಎಂಸಿಯಿಂದ ಬಸವೇಶ್ವರ ವೃತ್ತದವರೆಗಿನ ರಸ್ತೆಯ ಫುಟ್‌ಪಾತ್ ಒತ್ತುವರಿಯಾಗಿದೆ. ರಸ್ತೆಯ ಮೇಲೆ ತಳ್ಳುಬಂಡಿಗಳು ಕಾಣಿಸುತ್ತಿವೆ. ಜನಸಾಮಾನ್ಯರಿಗೆ ಓಡಾಡಲು ಕಷ್ಟವಾಗುತ್ತಿದೆ. ಇಂತಹ ವಿಷಯಗಳನ್ನು ಏಕೆ ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎಂದು ಮುಖ್ಯಾಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಪಟ್ಟಣದಲ್ಲಿ ಜಲ ಜೀವನ್ ಮಿಷನ್ ಯೋಜನೆ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ಆಮಿಷಗಳಿಗೆ ಒಳಗಾಗಿ ಅಧಿಕಾರಿಗಳು ಬಿಲ್ಲು ಪಾವತಿಸಿದ್ದಾರೆ ಎಂದು ಆರೋಪಿಸಿದರು. ಕಾರಂಜಾದಿಂದ ನೀರು ಸರಬರಾಜು ಯೋಜನೆಯ ಸ್ಥಳಕ್ಕೆ ನಾಲ್ಕು ಬಾರಿ ವೀಕ್ಷಣೆ ಮಾಡಿದ್ದೇನೆ. ನಿಮ್ಮ ಬಳಿ ಸಮರ್ಪಕ ಮಾಹಿತಿಯೂ ಸಿಗುತ್ತಿಲ್ಲ. ಮಾಂಜ್ರಾ ನದಿ ಹಾಗೂ ಮುಸ್ತಾಪೂರ್ ಕೆರೆಯಿಂದ ನೀರು ಸರಬರಾಜು ಯೋಜನೆ ಸೇರಿದಂತೆ ಪುರಸಭೆ ವ್ಯಾಪ್ತಿಯ ಕಾಮಗಾರಿಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದು ನಾಚಿಕೆಗೇಡಿತನ ಎಂದರು.

ಔರಾದ್-ಉದಗೀರ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇಂದು ಒತ್ತುವರಿಯಾಗಿ ಒಂದು ವಾಹನವೂ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಈ ರಸ್ತೆಯ ಅಭಿವೃದ್ಧಿಗೆ 3 ಕೋಟಿ ರೂ. ಅನುದಾನ ನೀಡಿದ್ದೇನೆ. ಜಾಗ ಒತ್ತುವರಿಯಾದ ಕಾರಣ ಮೂರು ವರ್ಷಗಳಾದರೂ ಕಾಮಗಾರಿ ಆರಂಭವಾಗಿಲ್ಲ. ತಹಸೀಲ್ದಾರರು ಹಾಗೂ ಪೊಲೀಸ್ ಸಿಬ್ಬಂದಿ ಕೂಡಲೇ ಕನಿಷ್ಠ ಚರಂಡಿವರೆಗೂ ಒತ್ತುವರಿ ತೆರವುಗೊಳಿಸಿ ರಸ್ತೆ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ತನಿಖೆಗೆ ಸೂಚನೆ : ಹಿಂದೆ ಮುಖ್ಯಾಧಿಕಾರಿಯಾಗಿ ಕೆಲಸ ಮಾಡಿದ ಅಧಿಕಾರಿ ಕರ ವಸೂಲಿ ಸರಿಯಾಗಿ ಮಾಡಿಲ್ಲ. ಲಕ್ಷಾಂತರ ರೂ. ಲೂಟಿ ಮಾಡಿರುವ ಬಗ್ಗೆ ದೂರುಗಳಿವೆ. 20 ಪೌರ ಕಾರ್ಮಿಕರನ್ನು ನಿಯಮ ಉಲ್ಲಂಘಿಸಿ ನೇಮಕ ಮಾಡಿಕೊಳ್ಳಲಾಗಿದೆ. ಅವರಿಗೆ ಆದೇಶ ಪತ್ರವೂ ಇಲ್ಲ. ಸಂಬಳವೂ ನೀಡದೆ ವಂಚಿಸಲಾಗಿದೆ. ಅವರ ಅವಧಿಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ತಹಸೀಲ್ದಾರರ ನೇತೃತ್ವದಲ್ಲಿ ಸಮಿತಿ ರಚಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಹೇಳಿದರು.

ಈ ಸಭೆಯಲ್ಲಿ ತಹಶೀಲ್ದಾರ್ ಮಹೇಶ್ ಪಾಟೀಲ್, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ್ ಪಾಟೀಲ್, ಪುರಸಭೆ ಮುಖ್ಯಾಧಿಕಾರಿ ರವಿ ಸುಕುಮಾರ್, ತಾಲ್ಲೂಕು ಆರೋಗ್ಯಾಧಿಕಾರಿ ಅನೀಲಕುಮಾರ್ ಹಾಗೂ ಜೆಸ್ಕಾಂ ಎಇಇ ರವಿ ಕಾರಬಾರಿ ಸೇರಿದಂತೆ ವಿವಿಧ ವಿಭಾಗಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಮಾಡಿದ ಅವಮಾನ ಖಂಡನಿಯ : ಅರವಿಂದಕುಮಾರ್ ಅರಳಿ



ಬೀದರ್,ಏ.28–

ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಮಾಡಿದ ಅವಮಾನ ಖಂಡನೀಯವಾಗಿದೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಅರವಿಂದಕುಮಾರ್ ಅರಳಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಇತ್ತೀಚೆಗೆ ನಡೆದ ಬಿಜೆಪಿಯ ಪ್ರತಿಭಟನೆಯಲ್ಲಿ ಬೀದರ್ ಮಂಡಲ ಅಧ್ಯಕ್ಷ ಶಶಿಧರ್ ಹೊಸಳ್ಳಿ ಅವರು ಮಲ್ಲಿಕಾರ್ಜುನ್ ಖರ್ಗೆ ಅವರ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿ ಅವಮಾನ ಮಾಡಿದ್ದಾರೆ. ಇದರಿಂದ ನನಗೆ ಬೇಸರವಾಗಿದೆ. ಅವರ ವಿರುದ್ಧ ಸುವೋಮೋಟೋ ಪ್ರಕರಣ ದಾಖಲಿಸಬೇಕು. ಇಲ್ಲವಾದರೆ ನಾವೇ ಅವರ ವಿರುದ್ಧ ಪ್ರಕರಣ ದಾಖಲಿಸಲು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಬಿಜೆಪಿಯವರು ಬೌದ್ಧಿಕ ದಿವಾಳಿತನ ತೋರಿಸುತ್ತಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನೀಡಿರುವ ಐದು ಗ್ಯಾರಂಟಿಗಳಿಂದ ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇದನ್ನು ಕಂಡು ಬಿಜೆಪಿಯವರು ಹತಾಶರಾಗಿದ್ದಾರೆ. ಅವರಿಗೆ ಮಾತನಾಡಲು ಬೇರೆ ಯಾವುದೇ ವಿಷಯಗಳಿಲ್ಲ. ಹೀಗಾಗಿ ಯಾವುದಾದರೂ ವಿಷಯ ತೆಗೆದು ಆರೋಪ ಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕರ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿ ಟೀಕೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಮಲ್ಲಿಕಾರ್ಜುನ್ ಖರ್ಗೆ ಅವರು ತಮಿಳುನಾಡಿನಲ್ಲಿ ಮೋದಿ ವಿರುದ್ಧ ''ಭಯೋತ್ಪಾದಕ'' ಎಂಬ ಪದ ಬಳಸಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. ಅದಕ್ಕೆ ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ಉಪರಾಷ್ಟ್ರಪತಿಗಳು ಉತ್ತರ ನೀಡಿದ್ದರು. ಉಪರಾಷ್ಟ್ರಪತಿಗಳು ತಮ್ಮ ಹುದ್ದೆಗೆ ತಕ್ಕಂತೆ ನಡೆದುಕೊಳ್ಳದೆ ಬಿಜೆಪಿ ಕಾರ್ಯಕರ್ತರಂತೆ ವರ್ತಿಸುತ್ತಿದ್ದಾರೆ ಎಂಬ ಅನುಮಾನ ಮೂಡಿದೆ. ಅವರು ಪಕ್ಷಭೇದವಿಲ್ಲದೆ ಹೇಳಿಕೆ ನೀಡಬೇಕಿತ್ತು. ಆದರೆ ಹಾಗಾಗಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಖರ್ಗೆ ಅವರು ''ಭಯೋತ್ಪಾದಕ'' ಎನ್ನುವ ಪದ ಬಳಸಿದ್ದರೆ ಅದಕ್ಕೆ ನನ್ನ ಒಪ್ಪಿಗೆಯಿದೆ. ಕಾರಣ, ಇಂದು ದೇಶದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಆತಂಕದ ವಾತಾವರಣ ಯಾರು ಸೃಷ್ಟಿಸುತ್ತಾರೋ ಅವರನ್ನು ಆತಂಕವಾದಿಗಳು ಎನ್ನುವುದು ಸಹಜ. ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿದರು.

ಪ್ರಧಾನಿ ಮೋದಿ ಅವರು ಅಗತ್ಯವಿರುವ ದೇಶಗಳೊಂದಿಗೆ ಸಂಬಂಧ ಬೆಳೆಸದೇ, ಬೇಡವಾದ ದೇಶಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ದೇಶದಲ್ಲಿ ಗ್ಯಾಸ್, ಪೆಟ್ರೋಲ್ ಸಮಸ್ಯೆಗಳು ಎದುರಾಗುತ್ತಿವೆ. ಇದರ ಪರಿಣಾಮ ಬಡವರ ಮೇಲಾಗುತ್ತಿದೆ. ಜನರು ಆತಂಕಕ್ಕೆ ಒಳಗಾಗಿದ್ದಾರೆ. ಆದ್ದರಿಂದಲೇ ಖರ್ಗೆ ಅವರು ಪ್ರಧಾನಿ ಅವರನ್ನು ಆತಂಕವಾದಿ ಎಂದಿರಬಹುದು. ಅವರ ಹೇಳಿಕೆಯಲ್ಲಿ ಯಾವುದೇ ತಪ್ಪಿಲ್ಲ ಎಂದು ಸಮರ್ಥಿಸಿಕೊಂಡರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಅಧ್ಯಕ್ಷ ಮಹಮ್ಮದ್ ಗೌಸ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಂಜಯ್ ಜಾಗಿರದಾರ್ ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಅಮೃತರಾವ್ ಚಿಮಕೋಡೆ, ಮಾಜಿ ವಿಧಾನ ಪರಿಷತ್ ಸದಸ್ಯ ಕೆ. ಪುಂಡಲಿಕರಾವ್, ಹಿರಿಯ ಮುಖಂಡ ಮನ್ನಾನ್ ಸೇಠ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಸಂಜು ಡಿ.ಕೆ., ಪಕ್ಷದ ಪ್ರಧಾನ ಕಾರ್ಯದರ್ಶಿ ಎಂ.ಎ.ಸಮಿ,ದತ್ತಾತ್ರಿ ಮೂಲಗೆ, ವಿನೋದ್ ಅಪ್ಪೆ, ಜಾರ್ಜ್ ಫರ್ನಾಂಡಿಸ್ ಉಪಸ್ಥಿತರಿದ್ದರು.



ಕಲಾ ಶ್ರೀಮಂತಿಕೆ ಹೆಚ್ಚಿಸಿದ ಚಿತ್ರಕಲಾವಿದರು : ಭೀಮಾಶಂಕರ

ಕಲಬುರಗಿ,

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಿದವರಲ್ಲಿ ಚಿತ್ರಕಲಾವಿದರ ಪಾತ್ರ ಮಹತ್ವದ್ದಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಭೀಮಾಶಂಕರ ಫಿರೋಜಾಬಾದ ಹೇಳಿದರು.

ನಗರದ ಕನ್ನಡ ಭವನದ ಕಲಾ ಸೌಧದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹೊಟ್ಟಿ ಫೌಂಡೇಶನ್ ಸಹಯೋಗದಲ್ಲಿ ಏರ್ಪಡಿಸಿದ್ದ ಒಂದು ದಿನದ ಚಿತ್ರಕಲಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಲಾ ಕುಂಚದಲ್ಲಿ ಅರಳುವ ಅನೇಕ ಪ್ರತಿಭೆಗಳು ನಮ್ಮ ಭಾಗದಲ್ಲಿವೆ. ಅಂತಹ ಪ್ರತಿಭೆಗಳನ್ನು ಗುರುತಿಸುವ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿರುವುದು ಅಭಿನಂದನೀಯ. ಸಂಸ್ಕೃತಿ ಪರಂಪರೆಯನ್ನು ಅನಾವರಣಗೊಳಿಸುವ ಶಕ್ತಿ ನಮ್ಮ ಚಿತ್ರಕಲಾವಿದರಲ್ಲಿದೆ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಚಿತ್ರಕಲಾವಿದರ ಪಾತ್ರವೂ ಪ್ರಮುಖವಾಗಿದೆ. ಕಲೆ ಉಳಿದರೆ ಸಂಸ್ಕೃತಿ ಉಳಿಯುತ್ತದೆ, ಸಂಸ್ಕೃತಿ ಉಳಿದಾಗ ನಾಡು ಉಳಿಯುತ್ತದೆ ಎಂದು ಹೇಳಿದರು.

ಹೊಟ್ಟಿ ಫೌಂಡೇಶನ ಅಧ್ಯಕ್ಷ ರೇವಣಸಿದ್ದಪ್ಪ ಹೊಟ್ಟಿ, ರಾಜಕುಮಾರ ಸೇಡಂ, ಸವಿತಾ ಪಾಟೀಲ, ಜಯಶ್ರೀ ಮುಚಳಂಬಿ, ವಿಜಯ ಬಿರಾದಾರ, ಚಂದ್ರಶೇಖರ ಬ್ಯಾಕೋಡ್, ಕಸಾಪ ಗೌರವ ಕಾರ್ಯದರ್ಶಿಗಳಾದ ಧರ್ಮಣ್ಣ ಎಚ್ ಧನ್ನಿ, ಶಿವರಾಜ ಅಂಡಗಿ, ನಾಗೇಂದ್ರ ಸಕ್ಕರಗಿ, ಚಿತ್ರಕಲಾವಿದರಾದ ಡಾ.ರೆಹಮಾನ ಪಟೇಲ್, ಮುಹಮ್ಮದ್ ಆಯೋಜಿದ್ದೀನ ಪಟೇಲ, ಡಾ.ಎಸ್.ಎಂ ನೀಲಾ, ಭಾಗ್ಯಶ್ರೀ ಕುಲಕರ್ಣಿ, ಲಕ್ಷ್ಮೀ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದರು.

ನಂತರ ಶಿಬಿರಾರ್ಥಿಗಳಿಗೆ ಕಸಾಪ ಗೌರವ ಕಾರ್ಯದರ್ಶಿ ಧರ್ಮಣ್ಣ ಧನ್ನಿ ಅವರು ಪ್ರಮಾಣ ಪತ್ರ ವಿತರಿಸಿ ಗೌರವಿಸಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಮಾನವೀಯತೆ ಮೆರೆದ ಸಂಸ್ಕೃತಿ ಸೇವಾ ಟ್ರಸ್ಟ್ (ರಿ) ರಾಯಚೂರು ತಂಡ

ಕಲ್ಯಾಣಿ ಮತ್ತು ದೇವಸ್ಥಾನವನ್ನು ಸ್ವಚ್ಛತೆ ಮಾಡುವ ಮೂಲಕ ಕಲ್ಯಾಣಿ ಮತ್ತು ದೇವಸ್ಥಾನಕ್ಕೆ ಹೊಸ ರೂಪವನ್ನು ನೀಡಿ ಮಾನವೀಯತೆಗೆ ಮುಂದಾದ ಸಂಸ್ಕೃತಿ ಸೇವಾ ಟ್ರಸ್ಟ್ (ರಿ) ರಾಯಚೂರು ಇವರ ತಂಡದ ಕಾರ್ಯಕ್ಕೆ ಇಡೀ ರಾಯಚೂರಿನ ಸಾರ್ವಜನಿಕರು ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ ಈ ಸಂದರ್ಭದಲ್ಲಿ ಸಂಸ್ಕೃತಿ ಸೇವಾ ತಂಡದ ವತಿಯಿಂದ ಮಾತನಾಡಿ ಈ ತಂಡದ ಮುಖ್ಯ ಉದ್ದೇಶ ಆರು ದಿನಗಳ ಕಾಲ ಕುಟುಂಬಕ್ಕಾಗಿ ದುಡಿದರೆ ಒಂದು ದಿನವಾದರೂ ಸಮಾಜಕ್ಕೆ ಮೀಸಲಿರಲಿ ಎನ್ನುವ ಮಹತ್ವದ ಸಂಕಲ್ಪ ನಮ್ಮದು ಎಂದರು ಪ್ರತಿಯೊಬ್ಬ ಸಾರ್ವಜನಿಕರು ನಮ್ಮೂರು ನಮ್ಮ ಜಿಲ್ಲೆ ಎನ್ನುವ ಹೆಮ್ಮೆಯೊಂದಿಗೆ ಐತಿಹಾಸಿಕ ಗುಡಿ ಗುಂಡಾರುಗಳ ಉಳಿವಿಗೆ ಕೈಜೋಡಿಸಬೇಕು ನಮ್ಮ ತಂಡ ಮಾಡುವಂತಹ ಪ್ರತಿಯೊಂದು ಕಾರ್ಯಕ್ಕೂ ಪ್ರತಿಯೊಬ್ಬರ ಸಹಾಯ ಸಹಕಾರ ತನುಮನ ದನದಿಂದ ನಮ್ಮೊಂದಿಗೆ ಬೆಂಬಲಿಸಬೇಕು ನಮ್ಮ ಪ್ರತಿಯೊಂದು ಸಾರ್ವಜನಿಕ ಆಸ್ತಿಯನ್ನು ಕಾಪಾಡಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ ಜೊತೆಗೆ ನಮ್ಮ ಹಿಂದಿನ ಐತಿಹಾಸಿಕ ಪರಂಪರೆ ಸಂಸ್ಕಾರ ಸಂಪ್ರದಾಯಗಳನ್ನು ಉಳಿಸುವಂತ ಕೆಲಸ ಯುವಕರು ಮುಂದಾಗಬೇಕು ನಮ್ಮ ತಂಡದ ಸೇವೆ ನಿರಂತರ ವಿರುತ್ತೆ ಎಲ್ಲಿಯಾದರೂ ಐತಿಹಾಸಿಕ ಗುಡಿ ಗುಂಡಾರಗಳ ಸ್ವಚ್ಛತೆಯ ಅವಶ್ಯಕತೆ ಇದ್ದಲ್ಲಿ ನಮ್ಮನ್ನು ಸಂಪರ್ಕಿಸಬಹುದು 7899959811 8147885291 ಜೊತೆಗೆ ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಮಹಾನಗರ ಪಾಲಿಕೆ ಆಯುಕ್ತರು ಈ ತಂಡದ ಕಾರ್ಯವನ್ನು ಗುರುತಿ ಸಹಾಯ ಸಹಕಾರದೊಂದಿಗೆ ಬೆಂಬಲವಾಗಿ ನಿಲ್ಲುವ ಕೆಲಸಕ್ಕೆ ಮುಂದಾಗಬೇಕು ಎಂದು ಕೇಳಿಕೊಂಡರು ಸೇವೆ ಮಾಡುವಂತಹ ಮನೋಭಾವವುಳ್ಳವರು ಸ್ವಯಂಸೇವಕರಾಗಿ ತಂಡದ ಜೊತೆ ಬಂದು ಸೇರಬಹುದು ಈ ಕಲ್ಯಾಣಿ ಸ್ವಚ್ಛತೆಯಲ್ಲಿ ಗುರು ರಾಘವೇಂದ್ರ ಮತದ ವ್ಯವಸ್ಥಾಪಕರಾದ ರಾಮಾಚಾರ್ಯ ಗರಗ್ ರವರು ಮಾತನಾಡಿ ಇಡೀ ಪ್ರಪಂಚ ಸ್ವಾರ್ಥದಿಂದ ತುಂಬಿ ತುಳುಕುತ್ತಿರುವಾಗ ಇಲ್ಲೊಂದು ಸಂಸ್ಥೆ ಯಾವುದೇ ಆಸೆ ಆಕಾಂಕ್ಷೆಗಳಿಲ್ಲದೆ ನಿಸ್ವಾರ್ಥವಾಗಿ ಸಮಾಜಕ್ಕೆ ಪ್ರೇರಣೆ ರೂಪದಲ್ಲಿ ಪ್ರತಿಯೊಬ್ಬರೂ ಇಂಥ ಐತಿಹಾಸಿಕ ಗುಡಿ ಗುಂಡಾರಗಳ ಸ್ವಚ್ಛತೆಯಲ್ಲಿ ಇಳಿದಿರುವುದು ಮಾನವನ ಕುಲಕ್ಕೆ ಮಾದರಿ ಇವರಿಗೆ ಭಗವಂತನ ಕೃಪೆ ಇರಲಿ ಎಲ್ಲರೂ ತಮ್ಮ ತಮ್ಮ ಕುಟುಂಬಕ್ಕಾಗಿ ದುಡಿಯುವವರುಉಂಟು ಯುವಕರ ತಂಡ ಸಮಾಜಕ್ಕೆ ದುಡಿತ ಇದ್ದಾರೆ ಈ ತಂಡಕ್ಕೆ ಎಲ್ಲರು ತನುಮನ ದನದಿಂದ ಬೆಂಬಲವನ್ನು ನೀಡಿ ಇನ್ನು ಹೆಚ್ಚಿನ ಯುವಕರು ಇಂಥ ಕಾರ್ಯದಲ್ಲಿ ಭಾಗಿಯಾಗಿ ಎಂದು ಕೇಳಿಕೊಂಡರು ಕಲ್ಯಾಣಿಯ ಸ್ವಚ್ಛತಾ ಕಾರ್ಯದಲ್ಲಿ ಸಂಸ್ಕೃತಿ ಸೇವಾ ತಂಡದ ಮರೆಪ್ಪ ನಾಯಕ ವಿಜಯಲಕ್ಷ್ಮಿ ಪ್ರಸನ್ನ ಕುಮಾರ್ ವಿಶ್ವ ಶಿವು ಜಾಬೀರ್ ವೆಂಕಟೇಶ್ ಆನಂದ್ ನಾಗರಾಜ್ ತಿಮ್ಮಪ್ಪ ಗೌತಮ್ ಸಂಧ್ಯಾ ಮಠದ ವ್ಯವಸ್ಥಾಪಕರು ರಾಮಾಚಾರಿ ಗರಗ್ ರಾಘವೇಂದ್ರ ಸರ್ ಉಪಸ್ಥಿತರಿದ್ದರು

ಹ್ಯಾಟ್ರಿಕ್ ಶಾಸಕ ಹಿಟ್ನಾಳ್ ರಿಗೆ ಸಚಿವ ಸ್ಥಾನ ನೀಡುವಂತೆ ನಾಗವೇಣಿ ಒತ್ತಾಯ

ರಾಘವೇಂದ್ರ ಹಿಟ್ನಾಳ್ ರವರು ಬಹುಮತದಿಂದ ಆಯ್ಕೆಯಾಗಿದ್ದು ಸರಳ ಸಜ್ಜನಿಕೆಯ ಜನಪ್ರಿಯ ಶಾಸಕರಾಗಿದ್ದಾರೆ. ಕೊಪ್ಪಳವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಅಪಾರ ಚಿಂತನೆ ಉಳ್ಳವರಾಗಿದ್ದು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ವಾಂಗೀಣ ಶ್ರಮಿಸುತ್ತಿದ್ದಾರೆ.

ಜನಪ್ರೀಯ ನಾಯಕರಾದ ಅವರಿಗೆ ಸಚಿವ ಸ್ಥಾನ ನೀಡಿದಲ್ಲಿ ಮತ್ತಷ್ಟು ಸಮಾಜಮುಖಿ ಹಾಗೂ ಅಭಿವೃದ್ಧಿ ಕಾರ್ಯಗಳುಮಾಡಲು ಅವಕಾಶ ನೀಡಿದಂತಾಗುತ್ತದೆ. ಅದಕ್ಕಾಗಿ ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಹಾಲುಮತ ಸಮಾಜದ ಯುವನಾಯಕಿ ನಾಗವೇಣಿ ಎಸ್ ಪಾಟೀಲ್ ಅವರು ಪಕ್ಷದ ವರಿಷ್ಠರಿಗೆ ಒತ್ತಾಯಿಸಿದ್ದಾರೆ.

ಉಚಿತ ಸಮ್ಮರ್ ಕ್ಯಾಂಪ್‌ನಲ್ಲಿ ಮಕ್ಕಳಿಗೆ ಚಟುವಟಿಕೆ ಆಧಾರಿತ ಕಲಿಕೆ

ಮಕ್ಕಳಿಗೆ ಅರಿವು ಮೂಡಿಸಲಾಗುತ್ತಿದೆ.

ಕಳೆದ ವಾರ ''ವಿಲೇಜ್ ಮ್ಯಾಪ್'' ಮತ್ತು ''ವಿಲೇಜ್ ಸರ್ವೆ'' ಚಟುವಟಿಕೆಗಳನ್ನು ನೀಡಲಾಗಿದ್ದು, ಮಕ್ಕಳು ತಮ್ಮ ಗ್ರಾಮದ ನಕ್ಷೆ ರಚಿಸಿ ಹಾಗೂ ಸಮೀಕ್ಷೆ ನಡೆಸುವ ಮೂಲಕ ಕಲಿಕೆಯಲ್ಲಿ ಹೊಸ ಅನುಭವ ಪಡೆದಿದ್ದಾರೆ. ಈ ಚಟುವಟಿಕೆಗಳು ಮಕ್ಕಳಲ್ಲಿ ಸೃಜನಾತ್ಮಕತೆ ಮತ್ತು ವಿಚಾರಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.


ಸಮ್ಮರ್ ರಜೆಯಲ್ಲಿಯೂ ಮಕ್ಕಳು ಸಮಯವನ್ನು ವ್ಯರ್ಥ ಮಾಡದೆ ಶಿಬಿರದಲ್ಲಿ ಭಾಗವಹಿಸುತ್ತಿರುವುದು ಶ್ಲಾಘನೀಯವಾಗಿದೆ. ಮಕ್ಕಳ ಹಾಜರಾತಿ ಹಾಗೂ ಆಸಕ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ.

ಈ ಶಿಬಿರದ ಯಶಸ್ಸಿಗೆ ಸಹಕಾರ ನೀಡಿದ ಎಸ್‌ಡಿಎಂಸಿ ಸದಸ್ಯ ಮಲ್ಲೇಶ್ ಸರ್ ಹಾಗೂ ವಡವಟ್ಟಿ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿಗೆ ಅಕ್ಷರ ಫೌಂಡೇಶನ್ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸಲಾಗಿದೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಐಪಿಎಲ್: ರನ್ ಹೊಳೆ, ಹಣದ ಸುರಿಮಳೆ, ಕ್ರಿಕೆಟ್ ಕಣ್ಮರೆ!



ಐಪಿಎಲ್‌ನಲ್ಲಿ ಹಣದ ಹರಿವಿದೆ, ಆಟಕ್ಕೆ ಗ್ಲಾಮರ್ ತಂದಿದೆ, ಪ್ರೇಕ್ಷಕರನ್ನು ಆಕರ್ಷಿಸಿದೆ- ಇದನ್ನು ನಿರಾಕರಿಸಲು ಸಾಧ್ಯವಿಲ್ಲ. ಆದರೆ, ಹುಚ್ಚು ಉನ್ಮಾದದ ಅಮಲಿಗೆ ಬಲಿಯಾದ, ಹಣದ ಥೈಲಿಗೆ ಮಾರುಹೋದ, ಮಾರುಕಟ್ಟೆ ಶಕ್ತಿಗಳ ಸೂತ್ರದ ಬೊಂಬೆಗಳಾದ ಈ ಐಪಿಎಲ್ ಆಟಗಾರರಿಗೆ ಕ್ರೀಡೆಯ ನಿಜವಾದ ಗುರಿ, ದಾರಿ ಮತ್ತು ಅರ್ಥ ಕೂಡ ತಿಳಿಯದಾಗಿದೆ.

ರನ್ ಹೊಳೆ ಹರಿಸುವ, ವಿಕೆಟ್ ಬೇಟೆಯಾಡುವ, ಕ್ಷಣಕ್ಷಣಕ್ಕೂ ರೋಚಕ ಕ್ಷಣವನ್ನು ಕಟ್ಟಿಕೊಡುವ ಚುಟುಕು ಕ್ರಿಕೆಟ್, ಅಭಿಮಾನಿಗಳಿಗೆ ಥ್ರಿಲ್ ಕೊಡುವ ಆಟ. ಚುಟುಕು ಕ್ರಿಕೆಟ್ ಮುಂದೆ ಐದು ದಿನದ ಟೆಸ್ಟ್ ಕ್ರಿಕೆಟ್ ಇರಲಿ, ಏಕದಿನ ಪಂದ್ಯಗಳೇ ಕಳೆಗುಂದತೊಡಗಿವೆ. ಇಂದಿನ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಎಂದರೆ ಕೇವಲ ಬ್ಯಾಟ್ಸ್‌ಮನ್‌ಗಳ ಅಬ್ಬರ, ಫೋರ್-ಸಿಕ್ಸರ್‌ಗಳ ಸುರಿಮಳೆ ಮತ್ತು ಸ್ಕೋರ್ ಬೋರ್ಡ್‌ನಲ್ಲಿ ರನ್‌ಗಳ ರಾಶಿ ಹಾಕುವ ಆಟ ಅನ್ನುವಂತಾಗಿದೆ.

ಕ್ರಿಕೆಟ್ ಈಗ ಕೇವಲ ಕ್ರೀಡೆಯಾಗಿ ಉಳಿದಿಲ್ಲ. ಸಂಯಮದ ಆಟಕ್ಕೆ ವೇಗ ಮತ್ತು ಉತ್ಕರ್ಷ ಒದಗಿ, ಆಟಗಾರರು ರನ್ ಹೊಳೆ ಹರಿಸುವ ಯಂತ್ರಗಳಾಗಿದ್ದಾರೆ. ರನ್ ಹೊಳೆ ಹರಿಸಿದಂತೆಲ್ಲ ಆಟಗಾರರ ಬೆಲೆ ಹೆಚ್ಚಾಗಿ, ಕೋಟಿಗಳ ಲೆಕ್ಕದಲ್ಲಿ ಬಿಕರಿಯಾಗುತ್ತಿದ್ದಾರೆ. ಕೆಲ ಆಟಗಾರರು ರಾಷ್ಟ್ರೀಯ ತಂಡಕ್ಕಿಂತ ಫ್ರಾಂಚೈಸಿ ಲೀಗ್‌ಗಳಿಗೆ ಆದ್ಯತೆ ಕೊಡುತ್ತಿದ್ದಾರೆ.

ಐಪಿಎಲ್ ಕ್ರಿಕೆಟ್ ಎನ್ನುವುದು ಈಗ ಮನರಂಜನೆ, ವ್ಯಾಪಾರ ಮತ್ತು ಅಂಕಿಅಂಶಗಳನ್ನು ಪೇರಿಸಲು ಬೇಕಾದ ಸಾಧನವಾಗಿ ರೂಪಾಂತರಗೊಂಡಿದೆ. ಆಟಗಾರರಿಗೆ ದಾಖಲೆಗಳನ್ನು ಪುಡಿಗಟ್ಟುವ ಪೊಗರು ಬಂದಿದೆ. ಒಂದು ಕಾಲದಲ್ಲಿ ಕ್ರಿಕೆಟ್ ಎಂದರೆ ಬ್ಯಾಟ್ ಮತ್ತು ಬಾಲ್ ನಡುವಿನ ಸಮತೋಲನದ ಕಾದಾಟವಾಗಿತ್ತು. ಆದರೆ ಇಂದಿನ ಐಪಿಎಲ್‌ನಲ್ಲಿ ಬ್ಯಾಟ್ಸ್‌ಮನ್‌ಗಳ ಆರ್ಭಟವೇ ಪ್ರಧಾನವಾಗಿದೆ. ಬೌಲರ್‌ಗಳ ಕಲೆ, ತಂತ್ರ, ಸಹನೆ ಎಲ್ಲವೂ ಮಿಂಚಿನ ಹೊಡೆತಗಳ ನಡುವೆ ಮಂಕಾಗುತ್ತಿದೆ. ಇದು ನಿಜಕ್ಕೂ ಕಳವಳಕಾರಿ ಸಂಗತಿಯಾಗಿದೆ.

ಒಂದು ಕಾಲದಲ್ಲಿ 160 ಅಥವಾ 180 ರನ್‌ಗಳು ಸ್ಪರ್ಧಾತ್ಮಕ ಮೊತ್ತ ಎನಿಸಿಕೊಳ್ಳುತ್ತಿದ್ದವು. ಆದರೆ ಇಂದು 250 ದಾಟಿದರೂ ಯಾವ ತಂಡವೂ ಸುರಕ್ಷಿತವಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೈದರಾಬಾದ್ ತಂಡದ 242, ಬೆಂಗಳೂರ್ ತಂಡದ 250, ಡೆಲ್ಲಿ ತಂಡದ 264, ಪಂಜಾಬ್ ತಂಡದ 265 ರನ್‌ಗಳು- ಕೇವಲ 20 ಓವರ್‌ಗಳ 120 ಬಾಲ್‌ಗಳಲ್ಲಿ.

ಕಳೆದ ಏ. 26ರಂದು ಕೆಕೆಆರ್-ಎಲ್‌ಎಸ್‌ಜಿ ಪಂದ್ಯದಲ್ಲಿ ಕೊನೆಯ ಬಾಲ್‌ನಲ್ಲಿ 7 ರನ್ ಬೇಕಾಗಿತ್ತು. ಮೊಹಮ್ಮದ್ ಶಮಿ ಸಿಕ್ಸರ್ ಎತ್ತಿದರು. ಎಲ್ಲರ ಪ್ರಶಂಸೆಗೂ ಪಾತ್ರರಾದರು. ಆದರೆ, ಸೂಪರ್ ಓವರ್‌ನಲ್ಲಿ ಎಲ್‌ಎಸ್‌ಜಿ ತಂಡ ಸೋಲುವ ಮೂಲಕ ಐದೇ ಐದು ನಿಮಿಷಗಳ ಹಿಂದಿನ ಸಿಕ್ಸರ್ ಬೆಲೆ ಕಳೆದುಕೊಂಡಿತ್ತು.

ಬೌಂಡ್ರಿಗಳ ಭರಾಟೆ, ಸಿಕ್ಸರ್‌ಗಳ ಸುರಿಮಳೆ, ವೇಗದ ರನ್‌ಗಳು- ಪ್ರೇಕ್ಷಕರನ್ನು ಮೈದಾನದತ್ತ ಸೆಳೆಯುತ್ತಿವೆ. ತಕ್ಷಣದ ಥ್ರಿಲ್ ನೀಡುವ ಮನರಂಜನೆಯಂತೆ ಕಾಣುತ್ತಿವೆ. ಪ್ರೇಕ್ಷಕರನ್ನು ಹಿಡಿದಿಡುವ ಸಾಧನಗಳು ಎನಿಸುತ್ತಿವೆ. ಇದನ್ನೇ ಮಾನದಂಡವಾಗಿಟ್ಟುಕೊಂಡು ತಂಡ ರಚಿಸುವಂತಾದರೆ? ಅಂದರೆ, ಮುಂದೊಂದು ದಿನ ಬೌಲರ್‌ಗಳ ಬದಲು ಅಷ್ಟೂ ಬ್ಯಾಟರ್‌ಗಳನ್ನೇ ಹಾಕಿಕೊಂಡು ತಂಡ ಮಾಡುವಂತೆ, ಯಂತ್ರಗಳು ಬೌಲ್ ಮಾಡುವಂತೆ, ಪ್ರತಿ ಬಾಲ್ ಅನ್ನು ಬ್ಯಾಟರ್‌ಗಳು ಆಗಸಕ್ಕೆ ಅಟ್ಟುವಂತೆ, ಅಪ್ಪಿ-ತಪ್ಪಿ ಬಾಲ್ ಫೀಲ್ಡರ್‌ಗಳ ಕೈಗೆ ಸಿಕ್ಕರೆ ಅದೃಷ್ಟದಂತೆ ಬರೀ ರನ್‌ಗಳ ಹೊಳೆ ಹರಿದರೂ ಆಶ್ಚರ್ಯವಿಲ್ಲ.

ಇದು ಸಂಪೂರ್ಣವಾಗಿ ಬ್ಯಾಟಿಂಗ್ ಪರವಾಗಿ ವಾಲಿದ ಏಕಪಕ್ಷೀಯ ಪ್ರದರ್ಶನವಾಗುತ್ತದೆ. ಬೌಲರ್‌ಗಳು ಕೇವಲ ರನ್ ಬಿಟ್ಟುಕೊಡುವ ಯಂತ್ರಗಳಂತೆ ಕಾಣತೊಡಗುತ್ತಾರೆ. ಯಾರ್ಕರ್, ದೂಸ್ರಾ, ಸ್ವಿಂಗ್ ಎಲ್ಲವೂ ಮರೆತು, ಮರೆಗೆ ಸರಿಸಲ್ಪಡುತ್ತವೆ. ಬೌಲರ್‌ಗಳಿಗೆ ಅವಕಾಶವೂ ಇಲ್ಲ, ಬೆವರಿಳಿಸಿ ಮಾಡಿದ ಬೌಲಿಂಗ್‌ಗೆ ಬೆಲೆಯೂ ಇಲ್ಲದಂತೆ ಕಾಣುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಏ. 27ರ ದೆಹಲಿ ಮತ್ತು ಬೆಂಗಳೂರು ಪಂದ್ಯದಲ್ಲಿ, ದೆಹಲಿ ತಂಡ ಆರಂಭದಲ್ಲೇ ಕುಸಿತ ಕಂಡು ಕೇವಲ 13 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡದ್ದು- ಎರಡು ಅತಿರೇಕಗಳನ್ನು ಕಣ್ಮುಂದೆ ತಂದಿರಿಸಿದ್ದೂ ಇದೆ. ಇದು ಆಟದ ವೈವಿಧ್ಯಕ್ಕೆ, ಕ್ರೀಡೆಯ ಸಮತೋಲನಕ್ಕೆ ಧಕ್ಕೆ ತರುತ್ತದೆ.

ಐಪಿಎಲ್ ಕ್ರಿಕೆಟ್ ಹೀಗಾಗಲು ಕೆಲವು ಪ್ರಮುಖ ಕಾರಣಗಳೂ ಇವೆ. ಪ್ರೇಕ್ಷಕರಿಗೆ ರಂಜನೆ ನೀಡುವ ಉದ್ದೇಶದಿಂದ ಫ್ಲಾಟ್ ಪಿಚ್‌ಗಳನ್ನು ಸಿದ್ಧಪಡಿಸುತ್ತಿರುವುದು; ಬೌಂಡರಿ ಗೆರೆಗಳನ್ನು ಹತ್ತಿರಕ್ಕೆ ತರುತ್ತಿರುವುದು; ಮತ್ತು ಇಂಪ್ಯಾಕ್ಟ್ ಪ್ಲೇಯರ್ ನಿಯಮ ಸಡಿಲಿಸಿರುವುದು. ಈ ಕಾರಣಗಳು ಬ್ಯಾಟ್ಸ್‌ಮನ್‌ಗಳಿಗೆ ವರದಾನವಾದರೆ, ಬೌಲರ್‌ಗಳ ಪಾಲಿಗೆ ಸಿಂಹಸ್ವಪ್ನವಾಗಿವೆ. ಇಂಪ್ಯಾಕ್ಟ್ ಪ್ಲೇಯರ್ ನಿಯಮವು ತಂಡಗಳಿಗೆ ಹೆಚ್ಚುವರಿ ಬ್ಯಾಟ್ಸ್‌ಮನ್ ಒದಗಿಸಿದ್ದು, ಆರಂಭಿಕ ಆಟಗಾರರು ಯಾವುದೇ ಭಯವಿಲ್ಲದೆ ಆಕ್ರಮಣಕಾರಿ ಆಟವಾಡಲು ಪ್ರೇರೇಪಿಸುತ್ತದೆ. ಇವೆಲ್ಲವೂ ಸೇರಿ ರನ್‌ಗಳದೇ ಆಟ ಆಗುತ್ತದೆ.

ಐಪಿಎಲ್ ಎನ್ನುವುದು ಕ್ರಿಕೆಟ್‌ಗೆ ಅಪಾರ ಜನಪ್ರಿಯತೆ, ಹಣ ಮತ್ತು ಹೊಸ ಪ್ರೇಕ್ಷಕರನ್ನು ಕರೆತಂದಿದೆ, ಅನುಮಾನವೇ ಇಲ್ಲ. ಆದರೆ, ಕೆಲ ಗಂಭೀರ ಆತಂಕಗಳನ್ನೂ ಒಡ್ಡಿದೆ. ಅತಿಯಾದ ರನ್ ಹರಿವು ಆರಂಭದಲ್ಲಿ ಪ್ರೇಕ್ಷಕರಿಗೆ ಖುಷಿ ನೀಡಬಹುದು. ಹಾಗಂತ ಐಪಿಎಲ್ ಕೇವಲ ಬೌಂಡರಿ-ಸಿಕ್ಸರ್‌ಗಳ ಅಂಕಿಅಂಶದ ಆಟವಾಗಬಾರದು. ಅದು ಕೌಶಲಗಳ ಸಮರವಾಗಬೇಕು. ರನ್‌ಗಳು ಮಿತಿ ಮೀರಿದರೆ, ಕ್ರಿಕೆಟ್‌ನ ಮೂಲ ಆತ್ಮವಾದ ಸ್ಪರ್ಧಾತ್ಮಕತೆ ಮಾಯವಾಗುತ್ತದೆ. ಕ್ರಿಕೆಟ್‌ನ ಸಾಂಪ್ರದಾಯಿಕ ಸೌಂದರ್ಯ ಸೈಡಿಗೆ ಸರಿಯುತ್ತದೆ. ಅದು ಆಟದ ಶುದ್ಧತೆಯನ್ನು ಕೆಡಿಸುತ್ತದೆ. ಚಿಯರ್‌ಲೀಡರ್ಸ್, ಜಾಹೀರಾತು, ಗ್ಲಾಮರ್‌ಗಳೆಲ್ಲ ಸೇರಿಕೊಂಡು ಕ್ರಿಕೆಟ್ ಶೋನಂತೆ ಕಾಣತೊಡಗುತ್ತದೆ. ಕಾಲಾನಂತರದಲ್ಲಿ ಶೋ ಕಳೆಗುಂದಿ, ಸರ್ಕಸ್ ಆಗುವ, ಆಟಗಾರರು ಸರ್ಕಸ್‌ನ ಪ್ರಾಣಿಗಳಂತಾಗುವ ಅಪಾಯವೂ ಇದೆ.

ಐಪಿಎಲ್ ನಿರ್ವಾಹಕರು ಮತ್ತು ಕ್ರಿಕೆಟ್ ಸಂಸ್ಥೆಗಳು ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ. ಪಿಚ್‌ಗಳ ಸ್ವಭಾವ, ಮೈದಾನಗಳ ಗಾತ್ರ, ನಿಯಮಗಳ ಸಮತೋಲನ- ಇವೆಲ್ಲವನ್ನು ಮರುಪರಿಶೀಲಿಸಿ, ಬ್ಯಾಟ್ಸ್‌ಮನ್ ಮತ್ತು ಬೌಲರ್ ನಡುವೆ ಸಮನ್ವಯವನ್ನು ಮರಳಿ ತರಬೇಕಾಗಿದೆ. ಇಲ್ಲವಾದರೆ, ಐಪಿಎಲ್ ರನ್‌ಗಳ ಹಬ್ಬವಾಗಿ ಉಳಿದು, ಕ್ರಿಕೆಟ್‌ನ ಆತ್ಮವನ್ನು, ಕ್ರೀಡೆಯ ಕಳೆಯನ್ನು ಕಳೆದುಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ಒಂದು ಕಾಲಕ್ಕೆ ಇಂಗ್ಲಿಷರ ಜಂಟಲ್‌ಮನ್ಸ್ ಪ್ಲೇ ಎನಿಸಿಕೊಂಡಿದ್ದ ಕ್ರಿಕೆಟ್, ಜಯ್ ಶಾ ಎನ್ನುವ ವ್ಯವಹಾರಸ್ಥನ ಕೈಗೆ ಸಿಕ್ಕು ಸಾವಿರಾರು ಕೋಟಿಗಳ ಉದ್ಯಮವಾಗಿದೆ. ಐಪಿಎಲ್ ಮೂಲಕ ಅನೇಕ ದೇಶೀಯ ಮಟ್ಟದ ಪ್ರತಿಭೆಗಳಿಗೆ, ಯುವ ಆಟಗಾರರಿಗೆ ಜಾಗತಿಕ ವೇದಿಕೆ ಸಿಕ್ಕಿದೆ. ಕ್ರಿಕೆಟ್ ಜನಪ್ರಿಯತೆ ಹೆಚ್ಚಾಗಿದೆ. ಆದಾಯ ದ್ವಿಗುಣಗೊಂಡಿದೆ ಎಂಬ ವಾದ ಮಂಡನೆಗೆ ಅನುಕೂಲವಾಗಿದೆ. ಸಮರ್ಥನೆಗೆ ದಾರಿಯಾಗಿದೆ. ಕಾಲದ ಮಹಿಮೆಯೋ ಏನೋ, ಅದು ಸರಿ ಎನಿಸುತ್ತಿದೆ.

ಐಪಿಎಲ್‌ನಲ್ಲಿ ಹಣದ ಹರಿವಿದೆ, ಆಟಕ್ಕೆ ಗ್ಲಾಮರ್ ತಂದಿದೆ, ಪ್ರೇಕ್ಷಕರನ್ನು ಆಕರ್ಷಿಸಿದೆ- ಇದನ್ನು ನಿರಾಕರಿಸಲು ಸಾಧ್ಯವಿಲ್ಲ. ಆದರೆ, ಹುಚ್ಚು ಉನ್ಮಾದದ ಅಮಲಿಗೆ ಬಲಿಯಾದ, ಹಣದ ಥೈಲಿಗೆ ಮಾರುಹೋದ, ಮಾರುಕಟ್ಟೆ ಶಕ್ತಿಗಳ ಸೂತ್ರದ ಬೊಂಬೆಗಳಾದ ಈ ಐಪಿಎಲ್ ಆಟಗಾರರಿಗೆ ಕ್ರೀಡೆಯ ನಿಜವಾದ ಗುರಿ, ದಾರಿ ಮತ್ತು ಅರ್ಥ ಕೂಡ ತಿಳಿಯದಾಗಿದೆ. ಮುಂದೊಂದು ದಿನ ಆಟ, ಆಟವಾಗಿ ಉಳಿಯುವುದು ಕೂಡ ಅನುಮಾನವಿದೆ.

ಅಹಿಂದ ನಾಯಕತ್ವ : ಜಾರಕಿಹೊಳಿ ಸಿದ್ದರಾಮಯ್ಯನವರ ಉತ್ತರಾಧಿಕಾರಿಯಾಗಬಲ್ಲರೇ?

ಅಹಿಂದ (ಅಲ್ಪಸಂಖ್ಯಾತ, ಹಿಂದುಳಿದ, ದಲಿತ) ಎನ್ನುವುದು ಕರ್ನಾಟಕದಲ್ಲಿ ಕೇವಲ ಒಂದು ರಾಜಕೀಯ ಸಮೀಕರಣವಲ್ಲ. ಅದೊಂದು ಪ್ರಬಲ ಸಾಮಾಜಿಕ ಚಳವಳಿಯೂ ಹೌದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗ ರಾಜಕೀಯ ಸಂಧ್ಯಾಕಾಲದಲ್ಲಿದ್ದಾರೆ. ಹಾಗಾಗಿ ಅಹಿಂದ ರಾಜಕಾರಣವನ್ನು ಮುಂದುವರಿಸುವವರು ಯಾರು ಎನ್ನುವ ಚರ್ಚೆ ಈಗ ಮುನ್ನೆಲೆಗೆ ಬಂದಿದೆ. ಅಹಿಂದ ವರ್ಗವನ್ನು ಮುಂದುವರಿಸುವ ನಾಯಕ ಯಾರೆಂಬ ಪ್ರಶ್ನೆ ಎದ್ದಾಗ ಮೊದಲು ಕೇಳಿ ಬರುವುದೇ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿ ಅವರ ಹೆಸರು. ಆದರೇ, ಸಿದ್ದರಾಮಯ್ಯ ಅವರ ಉತ್ತರಾಧಿಕಾರಿಯಾಗುವ ಸಾಮರ್ಥ್ಯ ಜಾರಕಿಹೊಳಿ ಹೊಂದಿದ್ದಾರೆಯೇ ಎನ್ನುವ ಪ್ರಶ್ನೆಯೂ ಇದೆ.

ಸತೀಶ್ ಜಾರಕಿಹೊಳಿ ತಮ್ಮಲ್ಲಿ ವೃದ್ಧಿಸಿಕೊಂಡಿರುವ ವೈಚಾರಿಕತೆ ಅವರ ಪ್ರಬಲ ಶಕ್ತಿ. ಮೂಢನಂಬಿಕೆ ವಿರೋಧಿ ಚಳವಳಿ ಮತ್ತು ಮಾನವ ಬಂಧುತ್ವ ವೇದಿಕೆಯ ಮೂಲಕ ಅವರು ಕೇವಲ ಅಧಿಕಾರಕ್ಕಾಗಿ ಅಲ್ಲದೆ, ಕೆಳವರ್ಗದವರ ಪ್ರಜ್ಞೆ ಜಾಗೃತಗೊಳಿಸಲು ಶ್ರಮಿಸುತ್ತಿದ್ದಾರೆ. ಇದು ಸಿದ್ದರಾಮಯ್ಯನವರ ಆರಂಭಿಕ ದಿನಗಳ ಹೋರಾಟವನ್ನು ನೆನಪಿಸುತ್ತದೆ.

ಉತ್ತರ ಕರ್ನಾಟಕದಲ್ಲಿ ಅಹಿಂದ ಮತಗಳನ್ನು ಕ್ರೋಡೀಕರಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಲಿಂಗಾಯತ ಪ್ರಾಬಲ್ಯದ ಈ ನೆಲದಲ್ಲಿ ದಲಿತ-ಹಿಂದುಳಿದ ವರ್ಗಗಳ ಧ್ವನಿಯಾಗಿ ಅವರು ಗುರುತಿಸಿಕೊಂಡಿದ್ದಾರೆ. ಅಬ್ಬರದ ರಾಜಕಾರಣದ ನಡುವೆಯೂ ಸತೀಶ್ ಅವರ ಸೌಮ್ಯ ಸ್ವಭಾವ ಮತ್ತು ವಿವಾದಮುಕ್ತ ಆಡಳಿತ ಶೈಲಿ ಶೋಷಿತ ವರ್ಗಗಳಿಗೆ ಭರವಸೆ ಮೂಡಿಸಿದೆ.

ಅಹಿಂದ ಪಥದ ಮುಂದಿರುವ ಅಡೆತಡೆಗಳು

ಸಿದ್ದರಾಮಯ್ಯನವರ ಎತ್ತರಕ್ಕೆ ಬೆಳೆಯಲು ಸತೀಶ್ ಅವರ ಮುಂದಿರುವ ಸವಾಲುಗಳು ಸಣ್ಣದಲ್ಲ. ಸಿದ್ದರಾಮಯ್ಯನವರು ಕುರುಬ ಸಮುದಾಯದ ಪ್ರಬಲ ಹಿನ್ನೆಲೆಯೊಂದಿಗೆ ಇಡೀ ರಾಜ್ಯದ ಅಹಿಂದ ವರ್ಗವನ್ನು ಸೆಳೆದವರು. ಸತೀಶ್ ಜಾರಕಿಹೊಳಿ ಅವರು ವಾಲ್ಮೀಕಿ ಸಮುದಾಯಕ್ಕೆ ಸೇರಿದವರು. ಬಿಜೆಪಿ ಕಡೆಗೆ ಬಹುತೇಕ ವಾಲಿರುವ ವಾಲ್ಮೀಕಿ ಸಮುದಾಯವನ್ನು ಅಹಿಂದದೆಡೆಗೆ ಮರಳಿ ಒಲೈಸುವ ಹೊಣೆಗಾರಿಯನ್ನು ಹೊರಬೇಕಾಗುತ್ತದೆ. ಮಾತ್ರವಲ್ಲದೆ, ಮೀಸಲಾತಿ ಲಾಬಿಯ ಆಚೆಗೂ ಇಡೀ ದಲಿತ ಸಮುದಾಯವನ್ನು (ಎಡ-ಬಲ ಪಂಗಡಗಳು) ಏಕೀಕರಿಸುವುದು ಅವರಿಗೆ ದೊಡ್ಡ ಸವಾಲಾಗಿ ಮುಂದಿದೆ. ಸಿದ್ದರಾಮಯ್ಯ ಅವರ ರಾಜಕೀಯ ನಿವೃತ್ತಿಯ ಬಳಿಕ ಸತೀಶ್ ಜಾರಕಿಹೊಳಿ ಎಲ್ಲರೊಂದಿಗೆ ಸಮನ್ವಯ ಸಾಧಿಸುತ್ತಾರೆಯೇ ಎನ್ನುವುದು ನಮ್ಮ ಮುಂದಿರುವ ಯಕ್ಷ ಪ್ರಶ್ನೆ.

ಕಾಂಗ್ರೆಸ್‌ನಲ್ಲಿ ನಾಯಕತ್ವಕ್ಕಾಗಿ ಡಿ.ಕೆ. ಶಿವಕುಮಾರ್ ಅಂತಹವರ ಪ್ರಭಾವದ ನಡುವೆ ತಳಮಟ್ಟದ ಸಂಘಟನೆಯನ್ನು ಹಿಡಿದಿಟ್ಟುಕೊಳ್ಳುವ ಸವಾಲು ಸತೀಶ್ ಜಾರಕಿಹೊಳಿ ಮುಂದಿದೆ. ಇಷ್ಟಲ್ಲದೆ, ಜಾರಕಿಹೊಳಿ ಸಹೋದರರು ಎಂಬ ಕೌಟುಂಬಿಕ ಪ್ರಭಾವ ಮತ್ತು ಸಕ್ಕರೆ ಕಾರ್ಖಾನೆಗಳ ಹಿನ್ನೆಲೆ, ಸಿದ್ಧಾಂತ ಮತ್ತು ಬಂಡವಾಳಶಾಹಿ ಹಿತಾಸಕ್ತಿಗಳ ನಡುವೆ ಸಂಘರ್ಷವನ್ನು ಮೆಟ್ಟಿ ನಿಲ್ಲುವ ಅಗತ್ಯತೆಯೂ ಇದೆ.

''ಅಹಿಂದ ಎನ್ನುವುದು ಕೇವಲ ಚುನಾವಣೆ ಗೆಲ್ಲುವ ಸೂತ್ರವಲ್ಲ, ಅದು ಸಾಮಾಜಿಕ ನ್ಯಾಯದ ರಥ. ಈ ರಥವನ್ನು ಎಳೆಯಲು ಕೇವಲ ಮತಗಳು ಸಾಲದು, ಶೋಷಿತರ ನೋವಿಗೆ ಮಿಡಿಯುವ ಎದೆಯೂ ಇರಬೇಕು.'' ಎಂದು ಸ್ವತಃ ಸತೀಶ್ ಜಾರಕಿಹೊಳಿ ಹೇಳುತ್ತಾರೆ. ಮೇಲ್ನೋಟಕ್ಕೆ ಅವರ ಕುಟುಂಬ, ಅವರ ಹಣ ಬಲ, ಬೆಳಗಾವಿ ಭಾಗದಲ್ಲಿರುವ ರಾಜಕೀಯ



ಪ್ರಭಾವ, ಸಕ್ಕರೆ ಕಾರ್ಖಾನೆಗಳ ಮಾಲೀಕತ್ವಗಳನ್ನೆಲ್ಲಾ ಗಮನಿಸಿದರೆ ಶೋಷಿತರ ಪರವಾಗಿ ಧ್ವನಿ ಎತ್ತುತ್ತಾರೆಯೇ ಎನ್ನುವ ಪ್ರಶ್ನೆ ಮೂಡಿದರೂ, ವೈಚಾರಿಕತೆಯನ್ನು ಪಾಲಿಸುವುದರಲ್ಲಿ ಜಾರಕಿಹೊಳಿ ಹಿಂದೆ ಬಿದ್ದಿಲ್ಲ, ಸೌಮ್ಯವಾದ ಸಿದ್ಧಾಂತಕ್ಕೆ ಅವರು ತೋರಿಸುವ ಬದ್ಧತೆ ಎಲ್ಲವೂ ಅವರ ಮೇಲೊಂದು ಭರವಸೆ ಮೂಡಿಸುತ್ತದೆ. ಆದರೆ, ''ಸಿದ್ದರಾಮಯ್ಯನವರ ನಂತರ ಅಹಿಂದ ನಾಯಕತ್ವಕ್ಕೆ ದೊಡ್ಡ ನಿರ್ವಾತ ಸೃಷ್ಟಿಯಾಗಲಿದೆ. ಆ ನಿರ್ವಾತವನ್ನು ತುಂಬಲು ಕೇವಲ ಜಾತಿ ನಾಯಕತ್ವ ಸಾಲದು, ಬದಲಿಗೆ ಅಂಬೇಡ್ಕರ್ ಮತ್ತು ಲೋಹಿಯಾ ಸಿದ್ಧಾಂತಗಳ ಸ್ಪಷ್ಟ ತಿಳಿವಳಿಕೆ ಇರುವ ನಾಯಕ ಬೇಕು.'' ''ಸತೀಶ್ ಜಾರಕಿಹೊಳಿ ಅವರು ಸ್ಮಶಾನದಲ್ಲಿ ವಾಸ್ತವ್ಯ ಹೂಡುವ ಮೂಲಕ ಅಂಧಶ್ರದ್ಧೆಯ ವಿರುದ್ಧ ಸಮರ ಸಾರಿದವರು. ಅಧಿಕಾರದ ಕುರ್ಚಿಗಿಂತಲೂ ಜನರ ಮನಸ್ಸಿನ ಕತ್ತಲೆಯನ್ನು ಹೋಗಲಾಡಿಸುವುದು ಅವರ ಆದ್ಯತೆಯಾದಾಗ ಮಾತ್ರ ಅವರು ಅಹಿಂದದ ನಿಜವಾದ ಉತ್ತರಾಧಿಕಾರಿಯಾಗಬಲ್ಲರು.''

ಸತೀಶ್ ಜಾರಕಿಹೊಳಿ ಅವರು ಸಿದ್ದರಾಮಯ್ಯನವರ ಉತ್ತರಾಧಿಕಾರಿಯಾಗಬೇಕೆಂದರೆ ಅವರು ಜಾರಕಿಹೊಳಿ ಬ್ರದರ್ಸ್ ಎಂಬ ಪ್ರಾದೇಶಿಕ ಚೌಕಟ್ಟಿನಿಂದ ಹೊರಬರಬೇಕು. ಉತ್ತರ ಕರ್ನಾಟಕದ ಪ್ರಭಾವದ ಜೊತೆಗೆ ಹಳೆ ಮೈಸೂರು ಭಾಗದ ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ವಿಶ್ವಾಸ ಗಳಿಸುವುದು ಅನಿವಾರ್ಯ. ಸಿದ್ದರಾಮಯ್ಯನವರಲ್ಲಿರುವ ಮಾಸ್ ಅಪೀಲ್ ಮತ್ತು ನಿರ್ದಾಕ್ಷಿಣ್ಯ ನಿರ್ಧಾರ ತೆಗೆದುಕೊಳ್ಳುವ ಗುಣವನ್ನು ಸತೀಶ್ ಅವರು ಮೈಗೂಡಿಸಿಕೊಂಡರೆ, ಕರ್ನಾಟಕದ ಭವಿಷ್ಯದ ಸಾಮಾಜಿಕ ನ್ಯಾಯದ ರಾಜಕಾರಣದ ಸಾರಥ್ಯ ಅವರದಾಗುವುದರಲ್ಲಿ ಸಂಶಯವಿಲ್ಲ.

ಅವಕಾಶಗಳು ಎದುರಾಗಬಹುದು, ಆದರೆ ದಾರಿ ಸಂಘರ್ಷಮಯವಾಗಿದೆ. ಸಿದ್ಧಾಂತ ಮತ್ತು ಅಧಿಕಾರದ ನಡುವಿನ ಸಮತೋಲನವೇ ಸತೀಶ್ ಅವರ ಭವಿಷ್ಯವನ್ನು ನಿರ್ಧರಿಸಲಿದೆ.

ಭಾವನಾತ್ಮಕ ವೈಚಾರಿಕ

ಸಿದ್ದರಾಮಯ್ಯ ಮತ್ತು ಸತೀಶ್ ಜಾರಕಿಹೊಳಿ ಇಬ್ಬರೂ ಅಹಿಂದ ರಾಜಕಾರಣದ ಪ್ರಮುಖ ಧ್ರುವಗಳೇ ಆಗಿದ್ದರೂ, ಅಹಿಂದ ವರ್ಗವು ಅವರನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಕೆಲವು ಮೂಲಭೂತ ವ್ಯತ್ಯಾಸಗಳಿವೆ.

ಸಿದ್ದರಾಮಯ್ಯನವರು ಅಹಿಂದ ವರ್ಗಕ್ಕೆ ಒಬ್ಬ ಭಾವನಾತ್ಮಕ ಜನನಾಯಕ. ಅವರು ಆ ವರ್ಗದ ಭಾಷೆಯಲ್ಲೇ ಮಾತನಾಡುತ್ತಾರೆ, ಅವರಂತೆಯೇ ಉಣ್ಣುತ್ತಾರೆ ಮತ್ತು ಅವರ ನೋವಿಗೆ ನೇರವಾಗಿ ಸ್ಪಂದಿಸುತ್ತಾರೆ. ಅಹಿಂದ ವರ್ಗಕ್ಕೆ ಸಿದ್ದರಾಮಯ್ಯ ಕೇವಲ ನಾಯಕರಲ್ಲ, ತಮ್ಮ ಮನೆಯ ಹಿರಿಯ ಸದಸ್ಯನಂತೆ ಕಾಣುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ಸತೀಶ್ ಜಾರಕಿಹೊಳಿ ಅವರು ವೈಚಾರಿಕ ಮತ್ತು ಸೈದ್ಧಾಂತಿಕ ನಾಯಕ. ಹಾಗಂತ ಸಿದ್ದರಾಮಯ್ಯನವರು ಸಿದ್ಧಾಂತವನ್ನು ಪಾಲಿಸುತ್ತಿಲ್ಲವೆಂದಲ್ಲ. ಸಿದ್ಧಾಂತದ ಜೊತೆಗೆ ಭಾವನಾತ್ಮಕವಾಗಿಯೂ ಅವರು ಸಂಬಂಧ ಬೆಸೆದುಕೊಂಡಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಮೂಢನಂಬಿಕೆ ವಿರೋಧಿ ಚಳವಳಿ, ಸ್ಮಶಾನ ವಾಸ್ತವ್ಯದಂತಹ ಕಾರ್ಯಕ್ರಮಗಳ ಮೂಲಕ ಕೆಳವರ್ಗದವರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಸಿದ್ದರಾಮಯ್ಯನವರನ್ನು ಜನರು ಪ್ರೀತಿಯಿಂದ ಒಪ್ಪಿಕೊಂಡರೆ, ಸತೀಶ್ ಅವರನ್ನು ಗೌರವದಿಂದ ನೋಡುತ್ತಾರೆ.

ಸಂಘಟನಾ ಶಕ್ತಿ ಮತ್ತು ವ್ಯಾಪ್ತಿ

1) ಸಿದ್ದರಾಮಯ್ಯನವರು ದಶಕಗಳ ಕಾಲ ರಾಜ್ಯಾದ್ಯಂತ ಸುತ್ತಾಡಿ, ಪ್ರತಿ ಹಳ್ಳಿಯಲ್ಲೂ ತಮ್ಮದೇ ಆದ ಬೆಂಬಲಿಗರನ್ನು ಸೃಷ್ಟಿಸಿಕೊಂಡಿದ್ದಾರೆ. ಹಳೆಯ ಮೈಸೂರು ಭಾಗದಿಂದ ಹಿಡಿದು ಕಲ್ಯಾಣ ಕರ್ನಾಟಕದವರೆಗೆ ಅವರ ಪ್ರಭಾವವಿದೆ.

2) ಸತೀಶ್ ಜಾರಕಿಹೊಳಿ ಅವರ ಪ್ರಭಾವ ಸದ್ಯಕ್ಕೆ ಉತ್ತರ ಕರ್ನಾಟಕ ಮತ್ತು ಬೆಳಗಾವಿ ಭಾಗಕ್ಕೆ ಹೆಚ್ಚು ಸೀಮಿತವಾಗಿದೆ. ಅಹಿಂದ ವರ್ಗದ ದೊಡ್ಡ ಭಾಗವಾಗಿರುವ ದಲಿತ ಸಮುದಾಯದಲ್ಲಿ ಸತೀಶ್ ಅವರಿಗೆ ಭದ್ರ ಬುನಾದಿ ಇದೆ. ಆದರೆ, ಹಳೆಯ ಮೈಸೂರು ಭಾಗದ ಕುರುಬರು ಅಥವಾ ಹಿಂದುಳಿದ ವರ್ಗಗಳು ಸಿದ್ದರಾಮಯ್ಯನವರನ್ನು ಒಪ್ಪಿಕೊಂಡಷ್ಟು ಸಹಜವಾಗಿ ಸತೀಶ್ ಅವರನ್ನು ಒಪ್ಪಿಕೊಳ್ಳಲು ಇನ್ನೂ ಕಾಲಾವಕಾಶ ಬೇಕು.

3) ಸಿದ್ದರಾಮಯ್ಯನವರಿಗೆ ಇರುವ ಒಂದು ವಿಶೇಷ ಗುಣವೆಂದರೆ ಅವರ ನೇರ ನಡೆ-ನುಡಿ. ಇದು ಶೋಷಿತ ವರ್ಗಗಳಿಗೆ ತುಂಬಾ ಇಷ್ಟವಾಗುತ್ತದೆ. ಸತೀಶ್ ಜಾರಕಿಹೊಳಿ ಅವರು ಸ್ವಲ್ಪ ಮಿತಭಾಷಿ ಮತ್ತು ಸೌಮ್ಯ ಸ್ವಭಾವದವರು. ರಾಜಕಾರಣದಲ್ಲಿ ಅಬ್ಬರದ ಮಾತುಗಳು ಮತ್ತು ಜನರನ್ನು ಸೆಳೆಯುವ ಚಾತುರ್ಯ ಸಿದ್ದರಾಮಯ್ಯನವರಲ್ಲಿ ಇರುವಷ್ಟು ಸತೀಶ್ ಅವರಲ್ಲಿ ಇನ್ನೂ ಪೂರ್ಣವಾಗಿ ಅನಾವರಣಗೊಂಡಿಲ್ಲ.

4) ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅನ್ನಭಾಗ್ಯ, ಕ್ಷೀರಭಾಗ್ಯದಂತಹ ಯೋಜನೆಗಳ ಮೂಲಕ ಅಹಿಂದ ವರ್ಗದ ಪ್ರತಿಯೊಂದು ಮನೆಗೂ ತಲುಪಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಇನ್ನೂ ಅಂತಹ ದೊಡ್ಡ ಮಟ್ಟದ ಆಡಳಿತಾತ್ಮಕ ಬದಲಾವಣೆ ತರುವ ಅವಕಾಶ ಪಡೆದಿಲ್ಲ. ಅಹಿಂದ ವರ್ಗವು ನಾಯಕನನ್ನು ಒಪ್ಪಿಕೊಳ್ಳುವುದು ಕೇವಲ ಭಾಷಣದಿಂದಲ್ಲ, ಬದಲಿಗೆ ಆ ನಾಯಕನಿಂದ ತಮ್ಮ ಬದುಕಿನಲ್ಲಿ ಉಂಟಾದ ಆರ್ಥಿಕ ಬದಲಾವಣೆಯಿಂದ.

ಸಿದ್ದರಾಮಯ್ಯ ಕುರುಬ ಸಮುದಾಯದವರು, ಸತೀಶ್ ವಾಲ್ಮೀಕಿ ಸಮುದಾಯದವರು. ಅಹಿಂದ ಒಕ್ಕೂಟದ ಒಳಗಿರುವ ಉಪಜಾತಿಗಳ ನಡುವಿನ ಆಂತರಿಕ ಪೈಪೋಟಿ ಕೂಡ ಇಲ್ಲಿ ಕೆಲಸ ಮಾಡುತ್ತದೆ. ಸಿದ್ದರಾಮಯ್ಯನವರ ನಂತರ ಅಹಿಂದಕ್ಕೆ ಪರ್ಯಾಯ ಯಾರು ಎಂಬ ಪ್ರಶ್ನೆ ಬಂದಾಗ, ಸತೀಶ್ ಅವರ ವೈಚಾರಿಕ ಬದ್ಧತೆಯೇ ಅವರಿಗೆ ಪ್ಲಸ್ ಪಾಯಿಂಟ್ ಆಗಬಹುದು. ಏಕೆಂದರೆ ಅಹಿಂದ ವರ್ಗಕ್ಕೆ ಕೇವಲ ರಾಜಕಾರಣಿಯಲ್ಲ, ಒಬ್ಬ ಸೈದ್ಧಾಂತಿಕ ಮಾರ್ಗದರ್ಶಿಯೂ ಬೇಕಾಗಿದ್ದಾರೆ. ನಾಯಕ ಸಮುದಾಯ ಕೇಸರೀಕರಣಗೊಂಡಿದೆ. ಅವರನ್ನು ಅಲ್ಲಿಂದ ಬಿಡಿಸಿ ತರುವ ಸವಾಲು ಮತ್ತು ಜವಾಬ್ದಾರಿ ಸತೀಶ್ ಮೇಲಿದೆ.

ಸಿದ್ದರಾಮಯ್ಯನವರನ್ನು ಅಹಿಂದ ವರ್ಗವು ನಮ್ಮ ಸಿದ್ದಣ್ಣ ಎಂದು ಒಪ್ಪಿಕೊಂಡಿದೆ. ಸತೀಶ್ ಜಾರಕಿಹೊಳಿ ಅವರು ಆ ಹಂತಕ್ಕೆ ತಲುಪಬೇಕಾದರೆ, ಬೆಳಗಾವಿಯ ಆಚೆಗೂ ರಾಜ್ಯದ ಪ್ರತಿ ಮೂಲೆಯ ಶೋಷಿತರ ಧ್ವನಿಯಾಗಿ ಗಟ್ಟಿಯಾಗಿ ಹೊರಹೊಮ್ಮಬೇಕು. ಸಿದ್ದರಾಮಯ್ಯನವರದು ಜನಪ್ರಿಯತೆಯ ಆಧಾರಿತ ಒಪ್ಪಿಗೆಯಾದರೆ, ಸತೀಶ್ ಜಾರಕಿಹೊಳಿ ಅವರದು ಪರಿವರ್ತನೆಯ ಆಧಾರಿತ ಒಪ್ಪಿಗೆಯಾಗಬೇಕಿದೆ. ಸತೀಶ್ ಜಾರಕಿಹೊಳಿ ಅವರಿಗೆ ಸಿದ್ದರಾಮಯ್ಯನವರಷ್ಟು ವ್ಯಾಪಕ ಒಪ್ಪಿಗೆ ಸಿಗಲು ಸಾಧ್ಯವಿದೆ, ಆದರೆ ಅದು ಕೇವಲ ಅಧಿಕಾರದಿಂದ ಬರುವುದಿಲ್ಲ; ಸಿದ್ದರಾಮಯ್ಯನವರಂತೆ ಅವರು ಜನಸಾಮಾನ್ಯರ ಜೊತೆಗಿನ ಭಾವನಾತ್ಮಕ ಬೆಸುಗೆಯನ್ನು ಗಟ್ಟಿಗೊಳಿಸಿಕೊಳ್ಳಬೇಕಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಪಂಚಮಸಾಲಿ ಪೀಠಗಳ ಗೊಂದಲ- ಭಾಗ 1 ಪಂಚಮಸಾಲಿಗರೇ ಪಂಚಪೀಠಗಳ ಆರ್ಥಿಕ ಸಂಪನ್ಮೂಲವಾಗಿದ್ದರು



ಲಿಂಗಾಯತ ಸಮುದಾಯದಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿರುವ ಪಂಚಮಸಾಲಿ ಉಪವರ್ಗದಲ್ಲಿಯೂ ತಮ್ಮದೇ ಪೀಠ ಸ್ಥಾಪಿಸಬೇಕೆಂಬ ಯೋಚನೆಗಳು ಆರಂಭಗೊಂಡವು. ಆಗ ವೀರಶೈವ ಪಂಚಪೀಠಗಳು ಅಕ್ಷರಶಃ ನಲುಗಿ ಹೋದವು. ಪಂಚಮಸಾಲಿಗರೇ ಪಂಚಪೀಠಗಳ ಆರ್ಥಿಕ ಸಂಪನ್ಮೂಲವಾಗಿದ್ದರು. ಹೇಗಾದರೂ ಮಾಡಿ ಪಂಚಮಸಾಲಿ ಪೀಠ ಆಗದಂತೆ ತಡೆಯುವ ಎಲ್ಲಾ ಹುನ್ನಾರಗಳು ವೀರಶೈವ ಪಂಚಪೀಠಗಳು ಆರಂಭಿಸಿದವು

ಕರ್ನಾಟಕದಲ್ಲಿ ಲಿಂಗಾಯತ ಮಠ ಪರಂಪರೆಗೆ ತನ್ನದೇ ಆದ ಹಿನ್ನೆಲೆ, ಹಿರಿಮೆ ಹಾಗು ಗರಿಮೆ ಇದೆ. ಕಲ್ಯಾಣ ಕ್ರಾಂತಿಯನ್ನು ವೈದಿಕರು ರಕ್ತಪಾತದ ಪ್ರತಿಕ್ರಾಂತಿಯ ಮೂಲಕ ಹಣಿದ ನಂತರ ಯಡಿಯೂರ ಸಿದ್ದಲಿಂಗ ಶಿವಯೋಗಿಗಳು ಬಸವ ಧರ್ಮದ ತತ್ವ ಸಿದ್ಧಾಂತಗಳನ್ನು ಪ್ರಚಾರ ಹಾಗು ಪ್ರಸಾರ ಮಾಡಲು ಬಸವಪ್ರಣೀತ ವಿರಕ್ತ ಮಠ ಪರಂಪರೆ ಸ್ಥಾಪಿಸಿದರು. ಹದಿನೈದು-ಹದಿನಾರನೆಯ ಶತಮಾನದಲ್ಲಿ ಬಸವ ಪರಂಪರೆಯ ಲಿಂಗಾಯತ ಮಠಗಳು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿಕೊಂಡವು. ವಿರಕ್ತ ಪರಂಪರೆಯನ್ನು ನಕಲು ಮಾಡಿ ಅದಾಗಲೇ ಲಿಂಗಾಯತ ಧರ್ಮಕ್ಕೆ ವಲಸೆ ಬಂದಿದ್ದ ಆಂಧ್ರದ ಆರಾಧ್ಯ ಬ್ರಾಹ್ಮಣರು ವೀರಶೈವ ಚತುರಾಚಾರ್ಯ ಪರಿಕಲ್ಪನೆ ಹುಟ್ಟುಹಾಕಿ ಮುಂದೆ ಪಂಚಾಚಾರ್ಯರಾಗಿ ಪಂಚ ಪೀಠಗಳನ್ನು ಸ್ಥಾಪಿಸಿದರು. ವಿರಕ್ತ ಮಠಗಳು ಅನ್ನ, ಶಿಕ್ಷಣ, ಉದ್ಯೋಗದ ಸೇವೆಯ ಜೊತೆಗೆ ಬಸವ ತತ್ವ ಮತ್ತು ಲಿಂಗಾಯತ ಧರ್ಮವನ್ನು ಪ್ರಚಾರ ಮಾಡಿದರೆ ವೀರಶೈವ ಪಂಚಪೀಠಗಳು ಪೂಜಾ, ಪ್ರಸಾದ, ಪಾದಪೂಜೆ, ಪಲ್ಲಕ್ಕಿ, ಕಾಣಿಕೆ, ಹೋಮ, ಹವನ, ರುದ್ರಾಭಿಷೇಕ, ಗದ್ದುಗೆ ನಿರ್ಮಾಣ, ಕಳಸಾರೋಹಣ, ಪ್ರಾಣ ಪ್ರತಿಷ್ಠಾಪನೆ ಮುಂತಾದ ಬಸವ ತತ್ವಕ್ಕೆ ವಿರೋಧವಾಗಿರುವ ಬ್ರಾಹ್ಮಣ್ಯದ ಆಚರಣೆಗೆ ಜೋತು ಬಿದ್ದವು. ಆಶ್ಚರ್ಯವೆಂದರೆ ವಿರಕ್ತ ಹಾಗು ಪಂಚಪೀಠ ಎರಡೂ ಪರಂಪರೆಯ ಮಠಗಳಿಗೆ ಜಾತಿ ಜಂಗಮರೇ ಪೀಠಸ್ಥರಾದರು. ಶ್ರೀಮಂತ ಹಾಗು ಬಡ ಲಿಂಗಾಯತರ ದೇಣಿಗೆ, ದಾಸೋಹದಿಂದ ಮಠಗಳು ಬಲಶಾಲಿಯಾಗಿ ಬೆಳೆದವು.

ಮಠಗಳು ಶಿಕ್ಷಣೋದ್ಯಮ, ಬಡ್ಡಿ ವ್ಯವಹಾರ, ಮತ್ತಿತರ ವ್ಯಾಪಾರ ಕೇಂದ್ರಗಳಾದವು. ಧರ್ಮಪ್ರಚಾರ, ಬಸವ ತತ್ವವನ್ನು ಮಠಗಳು ಮರೆತು ಕಾರ್ಪೋರೇಟ್ ಉದ್ಯಮಗಳಾಗಿ ರೂಪಾಂತರಗೊಂಡವು. ಎರಡೂ ಪರಂಪರೆಯ ಮಠಗಳ ಯಜಮಾನಿಕೆ ಜಾತಿ ಜಂಗಮರ ನಿಯಂತ್ರಣಕ್ಕೆ ಹೋಯಿತು. ಪ್ರತ್ಯಕ್ಷ ಹಾಗು ಪರೋಕ್ಷವಾಗಿ ಜಾತಿ ಜಂಗಮರು ಮಠಗಳು ಹಾಗು ಇಡೀ ಲಿಂಗಾಯತ ಸಮಾಜದ ಫಲಾನುಭವಿಗಳಾದರು. ಕಾಲಾನಂತರದಲ್ಲಿ ಲಿಂಗಾಯತ ಮಠಗಳಿಗೆ ಜಾತಿ ಜಂಗಮರು ಮಾತ್ರ ಮಠಾಧೀಶರಾಗಬೇಕು ಎನ್ನುವ ಕಡ್ಡಾಯ ನಿಯಮ ರೂಪಿಸಿ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಮಠಗಳಿಗೆ ವಟುಗಳನ್ನು ತಯ್ಯಾರಿಸುವ ತರಬೇತಿ ಶಾಲೆ ಆರಂಭಿಸಲಾಯಿತು. ಅದು ವಚನೋಕ್ತವಾಗಿರದೆ ಆಗಮೋಕ್ತವಾಗಿದ್ದು, ಕನ್ನಡವನ್ನು ಕಡೆಗಣಿಸಿ ಸಂಸ್ಕೃತದಲ್ಲಿ ತರಬೇತಿ ನೀಡಲಾರಂಭಿಸಿತು. ಇದರಿಂದ ಲಿಂಗಾಯತ ತತ್ವ ಸಿದ್ಧಾಂತಗಳು ಹಾಗು ಆಚರಣೆಗಳು ಶೈವೀಕರಣ, ವೈದಿಕೀರಣಗೊಂಡವು. ಲಿಂಗಾಯತ ಸಮಾಜ ಅಶುದ್ದೀಕರಣಗೊಂಡು ಹಾದಿ ಬಿಡಲು ಮಠಗಳೇ ನೇರವಾಗಿ ಹೊಣೆಯಾದವು. ಮಠಾಧೀಶರು ಧರ್ಮ ಪ್ರಚಾರ ಮರೆತು ಐಶಾರಾಮಿ ಜೀವನ ನಡೆಸುವುದು ಕಂಡು ಲಿಂಗಾಯತ ಸಮಾಜದಲ್ಲಿ ಅನೇಕ ಪ್ರಶ್ನೆಗಳು ಎದ್ದವು. ಲಿಂಗಾಯತ ಮಠಗಳಿಗೆ ಜಾತಿ ಜಂಗಮರು ಪೀಠಸ್ಥರಾದರೆ, ಮಠದ ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯಲ್ಲಿ, ಆರ್ಥಿಕ ವ್ಯವಹಾರದ ಆಯಕಟ್ಟಿನ ಸ್ಥಾನಗಳು ಮೇಲ್ವರ್ಗದ ಜನರು ಆವರಿಸಿದರು. ಈ ಧರ್ಮವನ್ನು ಕಟ್ಟಿದ, ಬೆಳೆಸಿದ, ಮತ್ತು ರಕ್ಷಿಸಿದ ಕುಂಬಾರ, ಕಂಬಾರ, ನೇಕಾರ, ಹಡಪದ, ಮಡಿವಾಳ ಮುಂತಾದ ಕಾಯಕ ವರ್ಗದ ಜನರು ನಿರ್ಲಕ್ಷಕ್ಕೆ ಒಳಗಾದರು.

ಈ ನಿರ್ಲಕ್ಷದ ಕಾರಣದಿಂದ ಕೊಡೆಕಲ್ಲು ಬಸವಣ್ಣ, ಸಿದ್ಧಪ್ಪಯ್ಯಾ ಪರಂಪರೆ, ಮುಂದೆ ಸಿದ್ಧಾರೂಢ ಹಾಗು ಶಿವಾನಂದರ ಪರಂಪರೆಗಳು ಲಿಂಗಾಯತ ಧರ್ಮದಿಂದ ವಿಮುಖವಾದವು. ಜಗಮೇತರರು ಹಾಗು ಪಂಚಮಸಾಲಿಗಳಾಗಿದ್ದ ಲಿಂಗೈಕ್ಯ ಲಿಂಗಾನಂದ ಸ್ವಾಮಿಗಳು ಬಸವ ತತ್ವ ಪ್ರಚಾರದ ಧ್ವಜವನ್ನು ಹಿಡಿದು ಲಿಂಗಾಯತ ಧರ್ಮದ ಬಸವ ಧರ್ಮ ಪೀಠ ಸ್ಥಾಪಿಸಿದ ಮೇಲೆ ವಿರಕ್ತ ಮಠಗಳಿಗೆ ಬಸವ ತತ್ವ ಪ್ರಚಾರ ಮಾಡುವುದು ಅನಿವಾರ್ಯವಾಯಿತು. ಜಂಗಮೇತರರು ಸಮರ್ಥವಾಗಿ ಮಠ ಸ್ಥಾಪಿಸಿ ಬಸವ ತತ್ವ ಪ್ರಚಾರ ಮಾಡಬಲ್ಲರು ಎನ್ನುವುದು ರುಜುವಾತು ಆದಂತೆ ಅನೇಕ ಜಂಗಮೇತರ ಭಕ್ತ ವರ್ಗದ ಸಾಧಕರು ಮಠಾಧೀಶರಾಗಹತ್ತಿದರು. ಇದಕ್ಕಿಂತ ಅನೇಕ ದಶಕಗಳ ಹಿಂದೆ ಲಿಂಗಾಯತ ಉಪ ವರ್ಗಗಳು ಪಂಚಪೀಠಗಳ ಕಪಟತನ, ಜಾತಿ ಶ್ರೇಷ್ಠತೆಯ ವಿರುದ್ಧ ತಿರುಗಿ ಬಿದ್ದವು. ಅದರ ಪರಿಣಾಮದಿಂದ ಗುಳೇದಗುಡ್ಡದಲ್ಲಿ ಶ್ರೀಮದ್ ಜಗದ್ಗುರು ಹಿಮವತ್ ಕೇದಾರ ಏಕೋರಾಮ ಲಿಂಗಾಯತ ನೇಕಾರ ಪೀಠ ತಲೆ ಎತ್ತಿತ್ತು. ಶರಣ ಜೇಡರ ದಾಸಿಮಯ್ಯನವರ ಮಗ ಏಕೋರಾಮನನ್ನು ಏಕೋರಾಮಾರಾಧ್ಯ ಎಂದು ಹೆಸರು ಬದಲಾಯಿಸಿ ವೀರಶೈವರು ಕೇದಾರ ಪೀಠ ಸೃಷ್ಟಿಸಿದ್ದರು. ನೇಕಾರ ಪೀಠದ ಸ್ಥಾಪನೆಯಿಂದ ಲಿಂಗಾಯತ ನೇಕಾರ ವರ್ಗದವರು ಪಂಚಪೀಠಗಳಿಂದ ದೂರ ಸರಿದರು. ಆನಂತರ ಇನ್ನೊಬ್ಬ ಶರಣ ಮರುಳ ಸಿದ್ದರ ಹೆಸರಲ್ಲಿ ಮರುಳಾರಾಧ್ಯ ಎಂದು ಹೆಸರು ಬದಲಾಯಿಸಿ ಪಂಚಪೀಠದವರು ಉಜ್ಜಯಿನಿ ಪೀಠವನ್ನು ಸ್ಥಾಪಿಸಿದ್ದರು.

ಮರುಳಸಿದ್ಧರನ್ನು ವೀರಶೈವರು ಅಪಹರಿಸಿದ್ದು ಸಹಿಸಿಕೊಳ್ಳದೆ ಮಧ್ಯ ಕರ್ನಾಟಕದಲ್ಲಿ ಲಿಂಗಾಯತ ಸಾದರ ಉಪ ವರ್ಗವು ತರಳಬಾಳು ಸದ್ಧರ್ಮ ಪೀಠವನ್ನು ಸ್ಥಾಪಿಸಿತು. ಇದರಿಂದ ಅತ್ಯಂತ ಶ್ರೀಮಂತ ಸಾದರ ಉಪವರ್ಗವು ಪಂಚಪೀಠಗಳಿಂದ ದೂರ ಸರಿಯಿತು. ಈ ಬೆಳವಣಿಯಿಂದ ಲಿಂಗಾಯತ ಭಕ್ತ ವರ್ಗದ ಮೇಲೆ ನಿಯಂತ್ರಣ ಹಾಗು ಯಜಮಾನಿಕೆ ಹೊಂದಿದ್ದ ಪಂಚ ಪೀಠದ ಜಾತಿ ಜಂಗಮರ ಪ್ರಭಾವವು ಕುಂಟಿತಗೊಳ್ಳಲಾರಂಭಿಸಿತು. ಅಲ್ಲಿಯವರೆಗೆ ಕೇವಲ ಜಾತಿ ಜಂಗಮರು ಮಾತ್ರ ಗುರುವಾಗಬಲ್ಲರು ಎನ್ನುವ ಸುಳ್ಳನ್ನು ನಂಬಿಸಿ ಭಕ್ತ ವರ್ಗವನ್ನು ಶೋಷಿಸುತ್ತಿದ್ದ ವೀರಶೈವ ಪಂಚ ಪೀಠಗಳಿಗೆ ಭಾರೀ ಹೊಡೆತ ಬಿದ್ದಿತು. ಇದರಿಂದ ಪ್ರೇರಣೆಗೊಂಡು ಉಳಿದ ಲಿಂಗಾಯತ ಉಪ ವರ್ಗಗಳು ತಮ್ಮ ತಮ್ಮ ಉಪ ವರ್ಗದ ಪ್ರತ್ಯೇಕ ಪೀಠಗಳನ್ನು ಸ್ಥಾಪಿಸಿದವು. ಚಿತ್ರದುರ್ಗದ ಶಿವಮೂರ್ತಿ ಶರಣರು ಎಲ್ಲಾ ಲಿಂಗಾಯತ ಉಪ ವರ್ಗಗಳ ಪೀಠ ಸ್ಥಾಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR